# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು** | : | **ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ** |
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **773** |
| **ಉತ್ತರಿಸಬೇಕಾದ ದಿನಾಂಕ** | : | **20.09.2022** |
| **ಉತ್ತರಿಸಬೇಕಾದ ಸಚಿವರು** | : | **ಸಹಕಾರ ಸಚಿವರು** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಸಹಕಾರ ಸಂಸ್ಥೆಗಳಿಂದ ರೈತರಿಗೆ ದೊರೆಯುತ್ತಿರುವ ಸಾಲ ಮತ್ತು ಇತರೆ ಸೌಲಭ್ಯಗಳು ಯಾವುವು; | ರಾಜ್ಯದಲ್ಲಿ ಸಹಕಾರ ಸಂಸ್ಥೆಗಳಿಂದ ರೈತರಿಗೆ ದೊರೆಯುತ್ತಿರುವ ಸಾಲ ಮತ್ತು ಇತರೆ ಸೌಲಭ್ಯಗಳು ಈ ಕೆಳಕಂಡಂತಿವೆ.<br>1) ರೂ. 3.00 ಲಕ್ಷಗಳವರೆಗೆ ಶೂನ್ಯ ಬಡ್ಡಿದರದಲ್ಲಿ ಅಲ್ಪಾವಧಿ ಬೆಳೆ ಸಾಲ ಹಾಗೂ ಹೈನುಗಾರಿಕೆ ಮತ್ತು ಮೀನುಗಾರಿಕೆ ಉದ್ದೇಶಕ್ಕಾಗಿ ಕೆ.ಸಿ.ಸಿ.ಸಾಲ.<br>2) ರೂ. 10.00 ಲಕ್ಷಗಳವರೆಗೆ ಶೇ. 3 ರ ಬಡ್ಡಿದರದಲ್ಲಿ ಮಧ್ಯಮಾವಧಿ/ದೀರ್ಘಾವಧಿ ಕೃಷಿ ಸಂಬಂಧಿತ ಸಾಲಗಳು.<br>3) ಕೃಷಿ ಅಡಮಾನ ಸಾಲಗಳ ಮೇಲೆ ಶೇ. 4 ರ ಬಡ್ಡಿ ಸಹಾಯಧನ.<br>4) ಕೃಷಿ ಉತ್ಪನ್ನಗಳ ಸಂಗ್ರಹಣಾ ಶುಲ್ಕದಲ್ಲಿ ವಿನಾಯಿತಿ. |
| ಆ) | ಪ್ರಸ್ತುತ ಆರ್ಥಿಕ ವರ್ಷದಲ್ಲಿ ರೈತ ಫಲಾನುಭವಿಗಳಿಗೆ ಸಾಲ ಪಡೆಯಲು ನಿಗದಿಪಡಿಸಿರುವ ಮಾನದಂಡ, ನಿಯಮ ಹಾಗೂ ಷರತ್ತುಗಳೇನು; (ಆದೇಶಗಳ ಪ್ರತಿ ಒದಗಿಸುವುದು) | ರೈತ ಫಲಾನುಭವಿಗಳು ಸಾಲ ಪಡೆಯಲು ನಿಗದಿಪಡಿಸಿರುವ ಮಾನದಂಡ, ನಿಯಮ ಹಾಗೂ ಷರತ್ತುಗಳ ವಿವರ ಈ ಕೆಳಕಂಡಂತಿವೆ.<br>1) ರೈತನು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಪಿಕಾರ್ಡ್ ಬ್ಯಾಂಕ್ ಅಥವಾ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳಲ್ಲಿ ಸದಸ್ಯನಾಗಿರಬೇಕು.<br>2) ಸಹಕಾರ ಸಂಘ/ಸಹಕಾರ ಬ್ಯಾಂಕ್‌ಗಳು ಹೊಂದಿರುವ ಸಾಲದ ನಿಯಮಗಳ ರೀತ್ಯಾ ಅಲ್ಪಾವಧಿ ಕೃಷಿ ಸಾಲಕ್ಕಾಗಿ ಮತ್ತು ಪಶುಸಂಗೋಪನೆ ಹಾಗೂ ಮೀನುಗಾರಿಕೆ ಉದ್ದೇಶಕ್ಕೆ ಸಾಲ ಪಡೆಯಲು ರೈತನು ಸಂಬಂಧಿಸಿದ ಸಂಘದ ಕಾರ್ಯವ್ಯಾಪ್ತಿಯ ವಾಸಿಯಾಗಿರಬೇಕು.<br>3) ಸಹಕಾರ ಸಂಘದಲ್ಲಿ/ಸಹಕಾರ ಬ್ಯಾಂಕಿನಲ್ಲಿ ಉಳಿತಾಯ ಖಾತೆ ಹೊಂದಿರಬೇಕು.<br>4) ರೈತನು/ಫಲಾನುಭವಿ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಹಾಲು ಪೂರೈಕೆ ಮಾಡುತ್ತಿರಬೇಕು. |

| | | |
|---|---|---|
| | | 5) ಈಗಾಗಲೇ ಸಾಲ ಪಡೆದು ಸುಸ್ತಿದಾರರಾಗಿರಬಾರದು.<br><br>6) ಒಂದಕ್ಕಿಂತ ಹೆಚ್ಚಿನ ಸಂಘದಲ್ಲಿ ಒಂದೇ ಉದ್ದೇಶಕ್ಕೆ ಸಾಲ ಪಡೆದಿರಬಾರದು.<br><br>7) ರೈತರು ಆಧಾರ್ ಕಾರ್ಡ್ ಪ್ರತಿ ಮತ್ತು ಆಧಾರ್ ಬಳಕೆಯ ಘೋಷಣಾ ಪತ್ರವನ್ನು ನೀಡತಕ್ಕದ್ದು.<br><br>ಆದೇಶದ ಪ್ರತಿಯನ್ನು **ಅನುಬಂಧ**ದಲ್ಲಿ ನೀಡಲಾಗಿದೆ. |
| ಇ) | ರಾಜ್ಯದಲ್ಲಿ ಇದುವರೆಗೆ ಸಹಕಾರ ಸಂಸ್ಥೆಗಳಿಂದ ರೈತರಿಗೆ ವಿತರಣೆಯಾಗಿರುವ ಸಾಲ ಮತ್ತು ಸೌಲಭ್ಯಗಳ ವಿವರಗಳೇನು; | 2022-23 ನೇ ಸಾಲಿಗೆ ಸಹಕಾರ ಸಂಸ್ಥೆಗಳಿಂದ **33** ಲಕ್ಷ ರೈತರಿಗೆ ರೂ. **24,000** ಕೋಟಿ ಕೃಷಿ ಸಾಲ ವಿತರಿಸಲು ವಾರ್ಷಿಕ ಗುರಿ ಹೊಂದಿದ್ದು, ತಹಲ್ ವರೆಗೆ **12.70** ಲಕ್ಷ ರೈತರಿಗೆ ರೂ. **9907.54** ಕೋಟಿ ಮೊತ್ತದ ಸಾಲ ವಿತರಿಸಲಾಗಿದೆ.<br>ಅಡಮಾನ ಸಾಲಕ್ಕೆ ಸಂಬಂಧಿಸಿದಂತೆ **68** ರೈತರಿಗೆ ರೂ. **2.52** ಕೋಟಿ ಮೊತ್ತದ ಸಾಲ ವಿತರಿಸಲಾಗಿದೆ. |
| ಈ | ಅರ್ಹ ರೈತ ಫಲಾನುಭವಿಗಳಿಗೆ ಪ್ರಸ್ತುತ ಆರ್ಥಿಕ ವರ್ಷದಲ್ಲಿ ಇನ್ನೂ ವಿತರಣೆಯಾಗಬೇಕಾಗಿರುವ ಸಾಲದ ಮೊತ್ತವೆಷ್ಟು ಹಾಗೂ ಯಾವ ಕಾಲಮಿತಿಯೊಳಗೆ ಈ ಮೊತ್ತವನ್ನು ವಿತರಿಸಲಾಗುವುದು? | ಪ್ರಸ್ತುತ ಆರ್ಥಿಕ ವರ್ಷದಲ್ಲಿ **20.30** ಲಕ್ಷ ರೈತರಿಗೆ ರೂ. **14,093** ಕೋಟಿ ಮೊತ್ತದ ಕೃಷಿ ಸಾಲ ವಿತರಣೆಗೆ ಬಾಕಿ ಇರುತ್ತದೆ. ರೈತರು ಸಲ್ಲಿಸಿದ ಬೇಡಿಕೆಗನುಗುಣವಾಗಿ ಸಾಲ ವಿತರಿಸಲಾಗುತ್ತಿದೆ. ಪ್ರಸಕ್ತ ಆರ್ಥಿಕ ವರ್ಷಾಂತ್ಯಕ್ಕೆ ಪ್ರಗತಿ ಸಾಧಿಸಲು ಎಲ್ಲಾ ರೀತಿಯ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. |

**ಸಂಖ್ಯೆ:ಸಿಒ 332 ಸಿಎಲ್ಎಸ್ 2022**

**(ಎಸ್.ಟಿ. ಸೋಮಶೇಖರ್)**
**ಸಹಕಾರ ಸಚಿವರು**

ಅನುಬಂಧ - 1

(1)

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2021-22 ನೇ ಸಾಲಿಗೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮತ್ತು ಪ್ರಾಥಮಿಕ ಕೃಷಿ ಮಾರುಕಟ್ಟೆ ಸಹಕಾರ ಸಂಘಗಳು ರೈತರು ಬೆಳೆದ ಕೃಷಿ ಉತ್ಪನ್ನಗಳನ್ನು ಗೋದಾಮುಗಳಲ್ಲಿ ಶೇಖರಣೆ ಮಾಡಿ ವಿತರಿಸುವ ಅಡಮಾನ ಸಾಲಕ್ಕೆ ಬಡ್ಡಿ ಸಹಾಯಧನ ಒದಗಿಸುವ ಬಗ್ಗೆ.

**ಓದಲಾಗಿದೆ**
1. 2021-22 ನೇ ಸಾಲಿನ ಆಯವ್ಯಯ ಭಾಷಣ ದಿ.08.03.2021 ರಲ್ಲಿಯ ಕಂಡಿಕೆ ಸಂಖ್ಯೆ: 77 ರ ಘೋಷಣೆ .
2. ಸಹಕಾರ ಸಂಘಗಳ ನಿಬಂಧಕರ ಕಛೇರಿ ಪತ್ರ ಸಂಖ್ಯೆ : ಆರ್‌ಸಿಎಸ್/ ಸಿಆರ್‌ಡಿ/ಸಿಎಬಿ-2/09/2021-22, ದಿ:16.04.2021

********

**ಪ್ರಸ್ತಾವನೆ:**

ಮೇಲೆ ಓದಲಾದ (1) ರಲ್ಲಿ 2021-22ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ ಸಂಖ್ಯೆ 77 ರಲ್ಲಿ 'ರಾಜ್ಯದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು(PACS) ಹಾಗೂ ಟಿ.ಎ.ಪಿ.ಸಿ.ಎಂ.ಎಸ್.ಗಳು ರೈತರು ಬೆಳೆದ ಕೃಷಿ ಉತ್ಪನ್ನಗಳನ್ನು ಗೋದಾಮುಗಳಲ್ಲಿ ಶೇಖರಣೆ ಮಾಡಿ ಇದರ ಮೇಲೆ ಮಾರುಕಟ್ಟೆ ಬೆಲೆಯ ಶೇ.60 ರಷ್ಟು ಅಡಮಾನ ಸಾಲವನ್ನು ಶೇ.11 ರ ಬಡ್ಡಿ ದರದಲ್ಲಿ ವಿತರಿಸುತ್ತಿವೆ. ಸದರಿ ಸಾಲಗಳ ಮೇಲೆ ಗರಿಷ್ಠ ಆರು ತಿಂಗಳ ಅವಧಿಗೆ ಶೇ.4 ರ ಬಡ್ಡಿ ಸಹಾಯಧನವನ್ನು ರಾಜ್ಯ ಸರ್ಕಾರವು ನೀಡಲು ಐದು ಕೋಟಿ ರೂ.ಗಳನ್ನು ಆಯವ್ಯಯದಲ್ಲಿ ಪ್ರಸ್ತಾಪಿಸಲಾಗಿದೆ.' ಎಂದು ಘೋಷಿಸಲಾಗಿದೆ.

ಮೇಲೆ ಓದಲಾದ (2) ರ ಸಹಕಾರ ಸಂಘಗಳ ನಿಬಂಧಕರ ಪತ್ರದಲ್ಲಿ 2021-22ನೇ ಸಾಲಿನಲ್ಲಿ ಈ ಯೋಜನ ಅನುಷ್ಠಾನಗೊಳಿಸಲು ಷರತ್ತುಗಳೊಂದಿಗೆ ಸರ್ಕಾರಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಒ 147 ಸಿಎಲ್‌ಎಸ್ 2021, ದಿನಾಂಕ:02.07.2021**

2/87

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮತ್ತು ಪ್ರಾಥಮಿಕ ಕೃಷಿ ಮಾರುಕಟ್ಟೆ ಸಹಕಾರ ಸಂಘಗಳು ರೈತರು ಬೆಳೆದ ಕೃಷಿ ಉತ್ಪನ್ನಗಳನ್ನು ಗೋದಾಮುಗಳಲ್ಲಿ ಶೇಖರಣೆ ಮಾಡಿ ವಿತರಿಸುವ ಅಡಮಾನ ಸಾಲಕ್ಕೆ ಬಡ್ಡಿ ಸಹಾಯಧನ ಒದಗಿಸುವ ಯೋಜನೆಯನ್ನು ಕೆಳಕಂಡ ಷರತ್ತುಗಳಿಗೊಳಪಟ್ಟು ಜಾರಿಗೊಳಿಸಲು ಸರ್ಕಾರ ಮಂಜೂರಾತಿ ನೀಡಿ ಆದೇಶಿಸಿದೆ.

**ಷರತ್ತುಗಳು:**

1. ಈ ಯೋಜನೆಯು ರೈತರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಪ್ರಾಥಮಿಕ ಕೃಷಿ ಮಾರುಕಟ್ಟೆ ಸಹಕಾರ ಸಂಘಗಳು ಹೊಂದಿರುವ ಗೋದಾಮುಗಳಲ್ಲಿ ಸಂಗ್ರಹಿಸಿದ ಕೃಷಿ ಉತ್ಪನ್ನಗಳಿಗೆ ಸದರಿ ಸಹಕಾರ ಸಂಘಗಳು ನೀಡುವ ಕೃಷಿ ಉತ್ಪನ್ನ ಅಡಮಾನ ಸಾಲಗಳಿಗೆ ಮಾತ್ರ ಅನ್ವಯವಾಗುತ್ತದೆ. ಸಹಕಾರ ಸಂಘಗಳು ನಿರ್ವಹಿಸುತ್ತಿರುವ ಖಾಸಗಿ ಗೋದಾಮುಗಳಲ್ಲಿ, ರೈತರ ಸ್ವಂತ ಗೋದಾಮುಗಳಲ್ಲಿ ಅಥವಾ ಉಗ್ರಾಣ ನಿಗಮಗಳಲ್ಲಿ ಶೇಖರಣೆ ಮಾಡುವ ಕೃಷಿ ಉತ್ಪನ್ನಗಳಿಗೆ ಅನ್ವಯವಾಗುವುದಿಲ್ಲ.

2. ಸಹಕಾರ ಸಂಘಗಳು ತಮ್ಮಲ್ಲಿ ಸಂಗ್ರಹಿಸಿದ ಕೃಷಿ ಉತ್ಪನ್ನಗಳಿಗೆ ಅಂದರೆ ಆಹಾರ ಧಾನ್ಯಗಳು, ಎಣ್ಣೆಕಾಳು, ದ್ವಿದಳ ಧಾನ್ಯಗಳು, ವಾಣಿಜ್ಯ ಮತ್ತು ತೋಟಗಾರಿಕೆ ಬೆಳೆಗಳಿಗೆ ಮಾತ್ರ ಅನ್ವಯವಾಗಲಿದ್ದು, ದ್ವಿತೀಯ ಸಂಸ್ಕರಿಸಿದ ಉತ್ಪನ್ನ (Secondary Processed Products) ಗಳಿಗೆ ಅನ್ವಯವಾಗುವುದಿಲ್ಲ.

3. ಸಹಕಾರ ಸಂಘಗಳು ಗರಿಷ್ಠ ಶೇ.11 ರ ದರದಲ್ಲಿ ಬಡ್ಡಿ ಆಕರಣೆ ಮಾಡಿ ಸಾಲವನ್ನು ವಿತರಿಸತಕ್ಕದ್ದು ಹಾಗೂ ಸಾಲದ ಮಿತಿಯನ್ನು ದಾಸ್ತಾನು ಮೌಲ್ಯದ ಗರಿಷ್ಠ ಶೇ.60 ಕ್ಕೆ ಮೀರದಂತೆ ಅಥವಾ ರೂ.2.00 ಲಕ್ಷಗಳ ಸಾಲದ ಮಿತಿ ಇದರಲ್ಲಿ ಯಾವುದು ಕಡಿಮೆಯೋ ಅದನ್ನು ನಿಗದಿಪಡಿಸತಕ್ಕದ್ದು, ಕೃಷಿ ಉತ್ಪನ್ನದ ಮೌಲ್ಯವನ್ನು ನಿರ್ಧರಿಸಲು ಆಯಾ ತಿಂಗಳ ಕನಿಷ್ಠ ಎಪಿಎಂಸಿ ಮಾರುಕಟ್ಟೆ ದರವನ್ನು ಪರಿಗಣಿಸತಕ್ಕದ್ದು.

4. ಈ ರೀತಿ ಒದಗಿಸಿದ ಸಾಲಕ್ಕೆ ಸಾಲ ವಿತರಿಸಿದ ದಿನಾಂಕದಿಂದ ಗರಿಷ್ಠ 6 ತಿಂಗಳ ಅವಧಿಗೆ ಅಥವಾ ಅಡಮಾನ ಇಟ್ಟ ಅವಧಿ ಇದರಲ್ಲಿ ಯಾವುದು ಮೊದಲೋ ಆ ಅವಧಿಗೆ ದೈನಂದಿನ ಸಾಲದ ಹೊರಬಾಕಿ ಮೇಲೆ ರಾಜ್ಯ ಸರ್ಕಾರದಿಂದ ಗರಿಷ್ಠ ಶೇ.4 ರ ಬಡ್ಡಿ ಸಹಾಯಧನ ನೀಡಲಾಗುವುದು. ಈ ಅವಧಿಗೆ ರೈತರಿಂದ ಶೇ.7 ರ ಬಡ್ಡಿ ದರದಲ್ಲಿ ಮಾತ್ರ ಬಡ್ಡಿ ವಸೂಲು ಮಾಡತಕ್ಕದ್ದು.

5. ಸಹಕಾರ ಸಂಘಗಳು ಪ್ರತೀ ತ್ರೈಮಾಸಿಕವಾಗಿ ಆಯಾ ತ್ರೈಮಾಸಿಕದಲ್ಲಿನ ಸಾಲದ ದೈನಂದಿನ ಹೊರಬಾಕಿ ಮೊತ್ತಕ್ಕೆ ಬಡ್ಡಿ ಸಹಾಯಧನದ ಬಿಲ್ಲು ತಯಾರಿಸಿ ಸಂಬಂಧಿಸಿದ ಸಹಕಾರ ಸಂಘಗಳ ಉಪ ನಿಬಂಧಕರಿಗೆ ಪ್ರತೀ ತ್ರೈಮಾಸಿಕ ಮುಗಿದ 15 ದಿನದೊಳಗಾಗಿ ಸಲ್ಲಿಸತಕ್ಕದ್ದು. ಸಂಬಂಧಿಸಿದ ಸಹಕಾರ ಸಂಘಗಳ ಉಪ ನಿಬಂಧಕರು ಎಲ್ಲಾ ಸಹಕಾರ ಸಂಘಗಳ ಖಾತೆಗಳನ್ನು ಪರಿಶೀಲಿಸಿ, ತ್ರೈಮಾಸಿಕ ಮುಗಿದ ಒಂದು ತಿಂಗಳೊಳಗಾಗಿ ದೃಢೀಕರಿಸಿ ಅಪೆಕ್ಸ್ ಬ್ಯಾಂಕಿನ ಮೂಲಕ ನಿಬಂಧಕರಿಗೆ ಬಿಲ್ಲು ಸಲ್ಲಿಸತಕ್ಕದ್ದು.

6. ಸಹಕಾರ ಸಂಘಗಳಿಂದ ನಿಗದಿತ ಅವಧಿಯಲ್ಲಿ ಬಿಲ್ಲುಗಳನ್ನು ಪಡೆಯುವ ಸಂಪೂರ್ಣ ಹೊಣೆಗಾರಿಕೆ ಉಪ ನಿಬಂಧಕರು ಹೊಂದಿರತಕ್ಕದ್ದು. ಯಾವುದೇ ಸಂಘಗಳು ನಿಗದಿತ ಅವಧಿ ಮುಗಿದ ನಂತರ ಬಿಲ್ಲುಗಳನ್ನು ಉಪ ನಿಬಂಧಕರಿಂದ ದೃಢೀಕರಿಸಿ ಸಲ್ಲಿಸಿದರೆ ಮತ್ತು ಸರ್ಕಾರದಿಂದ ಒಂದು ವೇಳೆ ಅನುದಾನ ಬಿಡುಗಡೆ ಆಗದೇ ಇದ್ದರೆ ಅದಕ್ಕೆ ಸಂಬಂಧಿಸಿದ ಸಹಕಾರ ಸಂಘಗಳು ಮತ್ತು ಉಪ ನಿಬಂಧಕರು ಜಂಟಿಯಾಗಿ ಹೊಣೆಯಾಗಿದ್ದು, ರೈತರಿಂದ ಬಡ್ಡಿ ವಸೂಲು ಮಾಡಲು ಅವಕಾಶ ಇರುವುದಿಲ್ಲ.

7. ರೈತನ ಪಹಣಿಯಲ್ಲಿನ ಭೂ ವಿಸ್ತೀರ್ಣ, ನಮೂದಿಸಿರುವ ಬೆಳೆ ಮತ್ತು ಇಳುವರಿಯನ್ನು ಪರಿಶೀಲಿಸಿ ಸಂಗ್ರಹಿಸಿರುವ ಕೃಷಿ ಉತ್ಪನ್ನ ಇದಕ್ಕೆ ಮೀರದೇ ಇರುವ ಬಗ್ಗೆ ಖಚಿತಪಡಿಸಿಕೊಂಡ ನಂತರವೇ ಸಾಲ ಒದಗಿಸತಕ್ಕದ್ದು. ಇತರೆ ಖಾಸಗಿ ವ್ಯಕ್ತಿಗಳು ರೈತನ ಹೆಸರಿನಲ್ಲಿ ಕೃಷಿ ಉತ್ಪನ್ನ ಶೇಖರಿಸಿ ಸಾಲ ಪಡೆಯಲು ಅವಕಾಶ ನೀಡಬಾರದು.

8. ಸಹಕಾರ ಸಂಘಗಳು ನಗದು ರೂಪದಲ್ಲಿ ಸಾಲ ವಿತರಿಸದೇ ಉಳಿತಾಯ ಖಾತೆಯ ಮೂಲಕವೇ ಸಾಲ ವಿತರಿಸತಕ್ಕದ್ದು.

9. ಸಾಲ ವಿತರಣೆಯಲ್ಲಿ ಸಣ್ಣ, ಅತೀ ಸಣ್ಣ ರೈತರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಸದಸ್ಯರಿಗೆ ನಿಯಮಾನುಸಾರ ಆದ್ಯತೆ ನೀಡತಕ್ಕದ್ದು.

10. ಈ ಸೌಲಭ್ಯಕ್ಕಾಗಿ ಅತೀ ಹೆಚ್ಚು ಬೇಡಿಕೆ ಬಂದಾಗ ಹಿಂದುಳಿದ ಪ್ರದೇಶಗಳಿಗೆ ಆಧ್ಯತೆ ನೀಡುವುದು.

11. ಪತ್ತಿನ ಸಹಕಾರ ಸಂಘಗಳ ಬಡ್ಡಿ ಸಹಾಯಧನದ ಬಿಲ್ಲುಗಳನ್ನು ಪ್ರತಿ ತ್ರೈಮಾಸಿಕವಾಗಿ ಪಡೆಯಲು ಸಹಕಾರ ಸಂಘಗಳ ನಿಬಂಧಕರು ನಮೂನೆಗಳನ್ನು ಸಿದ್ದಪಡಿಸಿ ಸಂಬಂಧಿಸಿದ ಸಂಘಗಳಿಂದ ಬಿಲ್ಲುಗಳನ್ನು ಪಡೆದು ಅನುದಾನ ಬಿಡುಗಡೆ ಮಾಡಿ ಬಳಕೆ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು.

12. ಈ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕಾಲಕಾಲಕ್ಕೆ ಸರ್ಕಾರ ಮತ್ತು ಸಹಕಾರ ಸಂಘಗಳ ನಿಬಂಧಕರು ನೀಡುವ ಸೂಚನೆಗಳನ್ನು ಸಂಬಂಧಿಸಿದ ಎಲ್ಲಾ ಸಹಕಾರ ಸಂಘಗಳು [illegible]

(3)



ಈ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿಎಸ್ 11 ಪಿಎಫ್ಆರ್ 2021, ದಿ:23.04.2021 ಹಾಗೂ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 60 ವೆಚ್ಚ-2/2021, ದಿ:21.06.2021ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಂ. ವೆಂಕಟಸ್ವಾಮಿ)
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಸಹಕಾರ ಇಲಾಖೆ

**ಇವರಿಗೆ**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು, ಇವರಿಗೆ ಕರ್ನಾಟಕ ರಾಜ್ಯ ಪತ್ರದಲ್ಲಿ ಕೂಡಲೇ ಪ್ರಕಟಿಸಿ, ಅದರ 50 ಪ್ರತಿಗಳನ್ನು ಒದಗಿಸಲು ಕೋರಿದೆ.

**ಪ್ರತಿಗಳು**

1. ಪ್ರಧಾನ ಮಹಾಲೇಖಪಾಲರು, (ಜಿ&ಎಸ್ಎಸ್ಎ)/(ಇ&ಆರ್ಎಸ್ಎ)/(ಎ&ಇ), ಕರ್ನಾಟಕ ರಾಜ್ಯ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
4. ಸಹಕಾರ ಸಂಘಗಳ ನಿಬಂಧಕರು, ನಂ.1, ಅಲಿ ಅಸ್ಕರ್ ರಸ್ತೆ, ಬೆಂಗಳೂರು-52.
5. ನಿರ್ದೇಶಕರು, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ, ಶಂಕರಮಠ ರಸ್ತೆ, ಬಸವನಗುಡಿ, ಬೆಂಗಳೂರು-04.
6. ಮುಖ್ಯಕಾರ್ಯನಿರ್ವಹಣಾಧಿಕಾರಿ, ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಉತ್ತುಂಗ, ನಂ.1, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-18.
7. ಮುಖ್ಯಕಾರ್ಯನಿರ್ವಹಣಾಧಿಕಾರಿ, ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ.,, ಚಾಮರಾಜಪೇಟೆ, ಬೆಂಗಳೂರು.
8. ರಾಜ್ಯ ಹುಜೂರ್ ಖಜಾನೆ, ನೃಪತುಂಗರಸ್ತೆ, ಬೆಂಗಳೂರು.
9. ರಾಜ್ಯ ಖಜಾನೆ ಅಧಿಕಾರಿ, ಜೆ.ಸಿ. ರಸ್ತೆ, ಬೆಂಗಳೂರು.
10. ಆಂತರಿಕ ಆರ್ಥಿಕ ಸಲಹೆಗಾರರು, ಸಹಕಾರ ಇಲಾಖೆ, ಬಹುಮಹಡಿಕಟ್ಟಡ, ಬೆಂಗಳೂರು.
11. ಮಾನ್ಯ ಸಹಕಾರ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
12. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಹಕಾರ ಇಲಾಖೆ, ಬೆಂಗಳೂರು
13. ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಸಹಕಾರ ಇಲಾಖೆ, ಬೆಂಗಳೂರು
14. ಸರ್ಕಾರದ ಅಧೀನ ಕಾರ್ಯದರ್ಶಿ-3, ಸಹಕಾರ ಇಲಾಖೆ, ಬೆಂಗಳೂರು
15. ಶಾಖಾ ರಕ್ಷಾ ಕಡತ: ಹೆಚ್ಚುವರಿ ಪ್ರತಿ.

ಕರ್ನಾಟಕ ಸರ್ಕಾರ

(ಸಹಕಾರ ಇಲಾಖೆ)

ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-52 ದೂ.22256146

ಸಂಖ್ಯೆ ಸಿಆರ್‌ಡಿ/ಸಿಎಬಿ-1/99/2021-22 ದಿನಾಂಕ:20-04-2022

## 'ಸುತ್ತೋಲೆ'

ವಿಷಯ :- 2022-23 ನೇ ಸಾಲಿನಲ್ಲಿ ರಾಜ್ಯದ ರೈತರಿಗೆ ಕೃಷಿ ಪತ್ತಿನ ಸಹಕಾರಿ ಸಂಸ್ಥೆಗಳು ಶೂನ್ಯ ಬಡ್ಡಿದರ ಅನ್ವಯವಾಗುವಂತೆ ರೂ.3.00 ಲಕ್ಷಗಳವರೆಗೆ ಅಲ್ಪಾವಧಿ ಕೃಷಿ ಸಾಲ ಮತ್ತು ರೂ.2.00 ಲಕ್ಷಗಳವರೆಗೆ ಪಶುಸಂಗೋಪನೆ ಮತ್ತು ಮೀನುಗಾರಿಕೆ ದುಡಿಯುವ ಬಂಡವಾಳ ಸಾಲ ಮತ್ತು ಶೇ.3 ರ ಬಡ್ಡಿ ದರ ಅನ್ವಯವಾಗುವಂತೆ ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಮತ್ತು ಕೃಷಿ ಸಂಬಂಧಿತ ಸಾಲ ವಿತರಿಸುವ ಬಗ್ಗೆ

ಉಲ್ಲೇಖ:-
1. ಸರ್ಕಾರದ ಆದೇಶ ಸಂಖ್ಯೆ ಸಿಒ 150 ಸಿಎಲ್‌ಎಸ್ 2022, ಬೆಂಗಳೂರು, ದಿ.08.04.2022
2. ಸರ್ಕಾರದ ಆದೇಶ ಸಂಖ್ಯೆ ಸಿಒ 153 ಸಿಎಲ್‌ಎಸ್ 2022, ಬೆಂಗಳೂರು, ದಿ.08.04.2022
3. ಸರ್ಕಾರದ ಪತ್ರ ಸಂಖ್ಯೆ ಸಿಒ 150 ಸಿಎಲ್‌ಎಸ್ 2022 ದಿ.8-04-2022

##

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ, ಸರ್ಕಾರ ಉಲ್ಲೇಖ 1 ರಲ್ಲಿ 2022-23 ನೇ ಸಾಲಿನಲ್ಲಿ ರಾಜ್ಯದ ರೈತರಿಗೆ ಕೃಷಿ ಪತ್ತಿನ ಸಹಕಾರಿ ಸಂಸ್ಥೆಗಳು ಶೂನ್ಯ ಬಡ್ಡಿದರ ಅನ್ವಯವಾಗುವಂತೆ ರೂ.3.00 ಲಕ್ಷಗಳವರೆಗೆ ಅಲ್ಪಾವಧಿ ಕೃಷಿ ಸಾಲ ಮತ್ತು ರೂ.2.00 ಲಕ್ಷಗಳವರೆಗೆ ಪಶುಸಂಗೋಪನೆ ಮತ್ತು ಮೀನುಗಾರಿಕೆ ದುಡಿಯುವ ಬಂಡವಾಳ ಸಾಲ ವಿತರಿಸುವ ಬಗ್ಗೆ, ಉಲ್ಲೇಖ 2 ರಲ್ಲಿ ಶೇ.3 ರ ಬಡ್ಡಿ ದರ ಅನ್ವಯವಾಗುವಂತೆ ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಮತ್ತು ಕೃಷಿ ಸಂಬಂಧಿತ ಸಾಲ ವಿತರಿಸುವ ಬಗ್ಗೆ ಆದೇಶ ಹೊರಡಿಸಿದ್ದು, ಉಲ್ಲೇಖ 3 ರಲ್ಲಿ ಈ ಯೋಜನೆಯಲ್ಲಿ ಸಹಕಾರ ಸಂಸ್ಥೆಗಳು ವಿತರಿಸಬೇಕಾದ ಸಾಲದ ಗುರಿಯನ್ನು ನಿಗದಿಪಡಿಸಿ ಪತ್ರ ನೀಡಿದ್ದು, ಮೂರು ಉಲ್ಲೇಖಿತ ಪ್ರತಿಗಳನ್ನು ಈ ಪತ್ರಕ್ಕೆ ಅನುಬಂಧ-1,2 ಮತ್ತು 3 ರಲ್ಲಿ ಲಗತ್ತಿಸಿ ತಮ್ಮ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.

ಸರ್ಕಾರದ ಉಲ್ಲೇಖ 1 ಮತ್ತು 2 ಆದೇಶದನ್ವಯ ಎಲ್ಲಾ ಅವಶ್ಯಕ ಕ್ರಮಗಳನ್ನು ತುರ್ತಾಗಿ ತೆಗೆದು ಕೊಳ್ಳಲು ನಿರ್ದೇಶಿಸಲಾಗಿದೆ.

ಉಲ್ಲೇಖ 3 ರಲ್ಲಿ ಸರ್ಕಾರ ಸನ್ಮಾನ್ಯ ಮುಖ್ಯ ಮಂತ್ರಿಗಳು 2022-23 ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುವಂತೆ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳು (ವಾಣಿಜ್ಯ ಬ್ಯಾಂಕುಗಳಿಗೆ ಅಧ್ಯರ್ಪಿತಗೊಂಡ ಪ್ಯಾಕ್ಸ್ ಗಳು ಮತ್ತು ಸಂಘಗಳ ಸ್ವಂತ ಬಂಡವಾಳವನ್ನು ಒಳಗೊಂಡಂತೆ) ಮತ್ತು ಕಸ್ಕಾರ್ಡ್ ಬ್ಯಾಂಕಿಗೆ 32,35,987 ರೈತರಿಗೆ ರೂ. 22,337 ಕೋಟಿಗಳ ಅಲ್ಪಾವಧಿ ಕೃಷಿ ಸಾಲ ಮತ್ತು ಪಶುಸಂಗೋಪನೆ ಹಾಗೂ ಮೀನುಗಾರಿಕೆ ದುಡಿಯುವ ಬಂಡವಾಳ ಸಾಲ ಮತ್ತು 64,013 ರೈತರಿಗೆ ರೂ.1,663 ಕೋಟಿಗಳ ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಮತ್ತು ಕೃಷಿ ಸಂಬಂಧಿತ ಸಾಲ ವಿತರಿಸಲು ಮತ್ತು ಈ ಪೈಕಿ 3,00,000 ಹೊಸ ಸದಸ್ಯರಿಗೆ ಸಾಲ ವಿತರಿಸಲು ಗುರಿ ನಿಗದಿಪಡಿಸಲಾಗಿದೆ.

ಈ ಗುರಿಯ ಆಧಾರದ ಮೇಲೆ ಡಿಸಿಸಿ ಬ್ಯಾಂಕುಗಳು ಮತ್ತು ಕಸ್ಕಾರ್ಡ್ ಬ್ಯಾಂಕ್ ದಿ.30-04-2022 ರೊಳಗಾಗಿ ಯಾವುದೇ ತಾಲ್ಲೂಕುಗಳಿಗೆ/ವಿಧಾನ ಸಭಾ ಕ್ಷೇತ್ರಗಳಿಗೆ ತಾರತಮ್ಯ ಮಾಡದೇ ಜಿಲ್ಲಾವಾರು, ಮಾಹೆವಾರು, ರೈತರ ವಿಧ ಹಾಗೂ ವರ್ಗಾವಾರು (ಜಿಲ್ಲೆಯಲ್ಲಿ ವಿವಿಧ ವರ್ಗಗಳ ರೈತರ ಪ್ರಮಾಣದ ಆಧಾರವಾಗಿ ಹೊಸ ಸದಸ್ಯರಿಗೆ, ಪ.ಜಾತಿ, ಪ.ಪಂಗಡದ, ಮಹಿಳೆಯರಿಗೆ ಮತ್ತು ಅಲ್ಪ ಸಂಖ್ಯಾತರಿಗೆ (ರೈತರ ಸಂಖ್ಯೆ ಮತ್ತು ಸಾಲದ ಮೊತ್ತ) ಪ್ರತ್ಯೇಕವಾಗಿ ಸಾಲದ ಗುರಿಯನ್ನು ನಿಗದಿಪಡಿಸಿ ಅಪೆಕ್ಸ್ ಬ್ಯಾಂಕಿನ ಮೂಲಕ ಈ ಕಛೇರಿಗೆ ಸಲ್ಲಿಸಲು ಸೂಚಿಸಲಾಗಿದೆ. ಮುಂದುವರೆದು ಈ ಗುರಿಯನ್ನು ಸಾಧಿಸಲು ವರ್ಷದ ಪ್ರಾರಂಭದಲ್ಲಿಯೇ ಸಂಪನ್ಮೂಲವನ್ನು ಸೂಕ್ತ ರೀತಿಯಲ್ಲಿ ಹೊಂದಿಕೆ ಮಾಡಿಕೊಳ್ಳಲು ಆಡಳಿತ ಮಂಡಳಿಗೆ ಮಂಡಿಸಲು ಮತ್ತು ಸಂಘವಾರು ಪ್ರತ್ಯೇಕವಾಗಿ ಸಾಲ ವಿತರಿಸಲು ಗುರಿ ನಿಗದಿಪಡಿಸಿ ಅದರನ್ವಯ ಸಾಲ ವಿತರಿಸಲು ಸೂಚಿಸಲಾಗಿದೆ. ಒಂದು ಸಂಘದಲ್ಲಿ ಗುರಿಗಿಂತ ಹೆಚ್ಚಿನ ಸಾಲದ ಬೇಡಿಕೆ ಬಂದರೆ ಕಡಿಮೆ ಬೇಡಿಕೆ ಇರುವ ಸಂಘದ ಗುರಿಯನ್ನು ಹೊಂದಾಣಿಕೆ ಮಾಡಿಕೊಳ್ಳಬಹುದಾಗಿದೆ. ಪ್ಯಾಕ್ಸ್‌ಗಳು ಸ್ಥಗಿತ/ಸಮಾಪನೆಗೊಂಡಿದ್ದರೆ ಅಥವಾ ಬಂಡವಾಳದ ಕೊರತೆ ಎದುರಿಸುತ್ತಿದ್ದಲ್ಲಿ ಡಿಸಿಸಿ ಬ್ಯಾಂಕಿನ ಶಾಖೆಗಳ ಮೂಲಕ ಸಾಲ ವಿತರಿಸುವುದರ ಮೂಲಕ ಎಲ್ಲಾ ಅರ್ಹ ರೈತರಿಗೆ ಕನಿಷ್ಠ ಪ್ರಮಾಣದ ದಾಖಲೆಗಳೊಂದಿಗೆ ಸಾಲ ದೊರೆಯುವಂತಾಗಲು ಅವಶ್ಯಕ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(5)

ಸರ್ಕಾರದ ಆದೇಶವನ್ನು ಸೂಚನಾ ಫಲಕದಲ್ಲಿ ಪ್ರಕಟಿಸುವುದು ಹಾಗೂ ಎಲ್ಲ ವರ್ಗದ ಸದಸ್ಯರಿಗೆ ಮುಖ್ಯವಾಗಿ ಪ.ಜಾತಿ/ಪಂಗಡದ ರೈತ ಸದಸ್ಯರಿಗೆ ಸಾಲದ ಅರ್ಜಿಗಳನ್ನು ಸುಲಭವಾಗಿ ದೊರೆಯುವಂತೆ ಕ್ರಮ ಕೈಗೊಳ್ಳತಕ್ಕದ್ದು ಮತ್ತು ಸಾಲದ ಅರ್ಜಿಗಳನ್ನು ಸ್ವೀಕರಿಸಿದ ಮತ್ತು ಸಾಲ ಮಂಜೂರಾದ ವಿವರಗಳನ್ನು ನಮೂದಿಸಲು ಪ್ರತ್ಯೇಕ ರಿಜಿಸ್ಟರ್‌ನ್ನು ಸಂಘಗಳ/ಬ್ಯಾಂಕುಗಳ ಮಟ್ಟದಲ್ಲಿ ನಿರ್ವಹಿಸತಕ್ಕದ್ದು.

ನಬಾರ್ಡ್‌ನಿಂದ ಆದ್ಯತಾ ಕೃಷಿ ಮತ್ತು ಕೃಷಿ ಸಂಬಂಧಿತ ದೀರ್ಘಾವಧಿ ಸಾಲಗಳಿಗೆ ಕಡಿಮೆ ದರದಲ್ಲಿ ದೊರೆಯುವ ಪುನರ್ಧನ ಸೌಲಭ್ಯವನ್ನು ಸಂಪೂರ್ಣವಾಗಿ ಬಳಕೆ ಮಾಡಿಕೊಳ್ಳಲು ಸಂಬಂಧಿಸಿದ ಎಲ್ಲಾ ಬ್ಯಾಂಕುಗಳಿಗೆ ಸೂಚಿಸಲಾಗಿದೆ. ಅಪೆಕ್ಸ್ ಬ್ಯಾಂಕಿನ ನಬಾರ್ಡ್ ಬಡ್ಡಿ ದರವನ್ನು ಪರಿಷ್ಕರಿಸಿದಲ್ಲಿ ಅದರ ವಿವರವನ್ನು ಈ ಕಛೇರಿಗೆ ಒದಗಿಸಲು ಸೂಚಿಸಲಾಗಿದೆ. ಇದರ ಆಧಾರದ ಮೇಲೆ ಸರ್ಕಾರದ ಬಡ್ಡಿ ಸಹಾಯಧನ ದರವನ್ನು ಪುನರ್ ನಿಗದಿಪಡಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು.

ಸರ್ಕಾರದ ಆದೇಶದಲ್ಲಿ ರಾಜ್ಯ ಮಟ್ಟದ ಹಾಗೂ ಜಿಲ್ಲಾ ಮಟ್ಟದ ಸಹಕಾರ ಸಂಸ್ಥೆಗಳು ಕೆಳ ಹಂತದ ಸಂಸ್ಥೆಗಳಿಗೆ ಆಕರಣೆ ಮಾಡಬೇಕಾದ ಬಡ್ಡಿ ದರ ಮತ್ತು ಸರ್ಕಾರ ಪಾವತಿಸುವ ಬಡ್ಡಿ ಸಹಾಯಧನದ ದರವನ್ನು ಪ್ರಾರಂಭದಲ್ಲಿಯೇ ನಿಗದಿಪಡಿಸಲಾಗಿದ್ದು, ಅದರನ್ವಯ ಬಡ್ಡಿ ಆಕರಣೆ ಮಾಡತಕ್ಕದ್ದು. ಇದನ್ನು ಪಾಲಿಸದೇ ಇದ್ದಲ್ಲಿ ಸಂಬಂಧಿಸಿದ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ತಳ ಹಂತದ ಸಂಸ್ಥೆಗಳಿಗಾಗುವ ನಷ್ಟಕ್ಕೆ ಜವಾಬ್ದಾರರಾಗಿರುತ್ತಾರೆ.

ಸರ್ಕಾರದ ಆದೇಶದಲ್ಲಿ ರೈತನಿಂದ ಪಡೆಯಬೇಕಾದ ಅವಶ್ಯಕ ದಾಖಲೆಗಳನ್ನು ಪ್ರಮುಖವಾಗಿ ಭೂಮಿ ಮತ್ತು ವಾಸ ಸ್ಥಳ ಬೇರೆ ಇದ್ದರೆ ಪಡೆಯಬೇಕಾದ ದಾಖಲೆಗಳು ಮತ್ತು ಯೋಜನೆಗೆ ಆಧಾರ್ ಜೋಡಣೆಗಾಗಿ ಆಧಾರ್ ದೃಢೀಕರಣ ಮುಂತಾದ ಮಾಹಿತಿ ಮತ್ತು ದೃಢೀಕರಣವನ್ನು ಪಡೆದು ಸೂಕ್ತ ರೀತಿಯಲ್ಲಿ ನಿರ್ವಹಣೆ ಮಾಡಲು ಮತ್ತು FRUITS ತಂತ್ರಾಂಶದಲ್ಲಿ ರೈತರ ಸಾಲದ ಮಾಹಿತಿಯನ್ನು ಸೂಕ್ತ ರೀತಿಯಲ್ಲಿ ದಾಖಲಿಸಲು ಸೂಚಿಸಲಾಗಿದೆ. ಸಹಕಾರ ಸಂಘಗಳು/ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ರೈತರ ಬ್ಯಾಂಕ್ ಉಳಿತಾಯ ಖಾತೆ ತೆರೆದಿರುವ ಬಗ್ಗೆ ಖಚಿತಪಡಿಸಿಕೊಂಡು ಹಾಗೂ ಬ್ಯಾಂಕ್ ಖಾತೆಯೊಂದಿಗೆ ರೈತರ ಆಧಾರ್ ಕಾರ್ಡ್ ಲಿಂಕ್ ಮಾಡಿ ಸಾಲ ವಿತರಿಸುವುದು ಕಡ್ಡಾಯವಾಗಿರುತ್ತದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಬಿಲ್ಲುಗಳಿಗೆ ಸಂಬಂಧಿಸಿದಂತೆ ಈ ಕಛೇರಿಯಿಂದ ಬಿಡುಗಡೆ ಮಾಡುವ ಬಡ್ಡಿ ಸಹಾಯಧನದ ಮೊತ್ತಕ್ಕೆ ರೈತವಾರು ಮಾಹಿತಿಯನ್ನು ಸಮಾಜ ಕಲ್ಯಾಣ ಇಲಾಖೆಯ ವೆಬ್ ಸೈಟ್ sw.kar.nic.in ನಲ್ಲಿ ಪ್ರತೀ ತಾಲ್ಲೂಕಿನ ಸಹಕಾರ ಅಭಿವೃದ್ಧಿ ಅಧಿಕಾರಿಗಳಿಗೆ ನೀಡಿದ ಲಾಗ್ ಇನ್ ಬಳಸಿ ಮಾಹಿತಿ ಅಳವಡಿಸುವುದು ಕಡ್ಡಾಯವಾಗಿರುತ್ತದೆ. ಇದಕ್ಕಾಗಿ ಯಾವ ಅವಧಿಯ ವಸೂಲಾತಿಗೆ ಈ ಕಛೇರಿಯಿಂದ ಅನುದಾನ ಬಿಡುಗಡೆಯಾಗಿರುತ್ತದೆಯೋ ಅದೇ ಅವಧಿಯಲ್ಲಿನ ಸಂಘವಾರು ಬಿಲ್ಲುಗಳಿಗೆ ಡಿಸಿಸಿ ಬ್ಯಾಂಕುಗಳು/ಕಸ್ಕಾರ್ಡ್ ಬ್ಯಾಂಕ್ ಹೊಂದಾಣಿಕೆ ಮಾಡಿಕೊಂಡು ಸದರಿ ಸಂಘಗಳಿಗೆ ಸಂಬಂಧಿಸಿದ ಪ.ಜಾ ಮತ್ತು ಪ.ಪಂಗಡದ ಮಾಹಿತಿಯನ್ನು ಪಡೆದು ಆನ್ ಲೈನ್ ಮೂಲಕ ಸಹಕಾರ ಸಂಘಗಳು ಸಹಕಾರ ಅಭಿವೃದ್ಧಿ ಅಧಿಕಾರಿಗಳ ಮೂಲಕ ತಂತ್ರಾಂಶದಲ್ಲಿ ಅನುದಾನ ಬಿಡುಗಡೆಯಾದ ವರ್ಷದ ಕಾಲಂಗಳಲ್ಲಿ ಎಂಟ್ರಿ ಮಾಡಲು ಡಿಸಿಸಿ ಬ್ಯಾಂಕುಗಳ ಶಾಖಾ ವ್ಯವಸ್ಥಾಪಕರು ಕ್ರಮ ವಹಿಸಬೇಕು.

ಸರ್ಕಾರದ ಆದೇಶದ ಷರತ್ತುಗಳು ಮತ್ತು ಮೇಲಿನ ನಿರ್ದೇಶನಗಳನ್ನು ಪಾಲಿಸಿ ಯೋಜನೆಯನ್ನು ಸರಿಯಾದ ರೀತಿಯಲ್ಲಿ ಜಾರಿಗೊಳಿಸಲು ಎಲ್ಲಾ ಅವಶ್ಯಕ ಕ್ರಮಗಳನ್ನು ತೆಗೆದುಕೊಳ್ಳಲು ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ

(ಎನ್. ಜಿಯಾಉಲ್ಲಾ)
ಸಹಕಾರ ಸಂಘಗಳ ನಿಬಂಧಕರು
ಕರ್ನಾಟಕ ರಾಜ್ಯ, ಬೆಂಗಳೂರು

1. ಮುಖ್ಯಕಾರ್ಯನಿರ್ವಹಣಾಧಿಕಾರಿಗಳು,
   ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ.,
2. ವ್ಯವಸ್ಥಾಪಕ ನಿರ್ದೇಶಕರು,
   ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ, ಬೆಂಗಳೂರು
3. ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರು,
4. ಎಲ್ಲಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು,
5. ಎಲ್ಲಾ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರು,
6. ಎಲ್ಲಾ ಉಪವಿಭಾಗೀಯ ಸಹಕಾರ ಸಂಘಗಳ ಸಹಾಯಕ ನಿಬಂಧಕರುಗಳು.

ವಿಷಯ: 2022-23ನೇ ಸಾಲಿಗೆ ರಾಜ್ಯದ ರೈತರಿಗೆ ಪತ್ತಿನ ಸಹಕಾರಿ ಸಂಸ್ಥೆಗಳು ಶೂನ್ಯ ಬಡ್ಡಿದರ ಅನ್ವಯವಾಗುವಂತೆ ರೂ.3.00 ಲಕ್ಷಗಳವರೆಗೆ ಅಲ್ಪಾವಧಿ ಕೃಷಿ ಸಾಲ ಮತ್ತು ರೂ.2.00 ಲಕ್ಷಗಳವರೆಗೆ ಪಶುಸಂಗೋಪನೆ ಮತ್ತು ಮೀನುಗಾರಿಕೆಗೆ ದುಡಿಯುವ ಬಂಡವಾಳ ಸಾಲ ವಿತರಿಸುವ ಬಗ್ಗೆ.

**ಓದಲಾಗಿದೆ:**

1. 2022-23 ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ ಸಂಖ್ಯೆ 68
2. ಸರ್ಕಾರದ ಆದೇಶ ಸಂಖ್ಯೆ:ಸಿಒ 166 ಸಿಎಲ್‌ಎಸ್ 2021, ದಿನಾಂಕ:27.09.2021.
3. ಸಹಕಾರ ಸಂಘಗಳ ನಿಬಂಧಕರ ಪತ್ರ ಸಂಖ್ಯೆ: ಆರ್‌ಸಿಎಸ್/ಸಿಆರ್‌ಡಿ/ಸಿಎಬಿ-1/ 99/2021-22, ದಿನಾಂಕ: ದಿನಾಂಕ:23 .03.2022

********

ಪ್ರಸ್ತಾವನೆ:

ಮೇಲೆ ಓದಲಾದ ಕ್ರ.ಸಂ(1) ರಲ್ಲಿ 2022-23ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ 68 "ಸಹಕಾರ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸುತ್ತಿರುವ ಬಡ್ಡಿ ಸಹಾಯಧನ ಯೋಜನೆಯಡಿ 2021-22ನೇ ಸಾಲಿನಲ್ಲಿ ಇಲ್ಲಿಯತನಕ ಒಟ್ಟು 22.50 ಲಕ್ಷ ರೈತರಿಗೆ 16,355 ಕೋಟಿ ರೂ.ಗಳ ಕೃಷಿ ಸಾಲವನ್ನು ವಿತರಿಸಲಾಗಿದ್ದು, ಇದರಲ್ಲಿ 2.5 ಲಕ್ಷ ಹೊಸ ರೈತರಿಗೆ ಸಾಲ ವಿತರಿಸಲಾಗಿದೆ. 2022-23ನೇ ಸಾಲಿನಲ್ಲಿ ಒಟ್ಟು 33 ಲಕ್ಷ ರೈತರಿಗೆ 24,000 ಕೋಟಿ ರೂ.ಗಳ ಕೃಷಿ ಸಾಲವನ್ನು ವಿತರಿಸುವ ಗುರಿ ಹೊಂದಿದ್ದು, ಇದರಲ್ಲಿ 3 ಲಕ್ಷ ಹೊಸ ರೈತರಿಗೆ ಸಾಲವನ್ನು ನೀಡಲಾಗುವುದು" ಎಂದು ಘೋಷಿಸಲಾಗಿದೆ.

ಮೇಲೆ ಓದಲಾದ ಕ್ರ. ಸಂ. ಕ್ರ.ಸಂ (2)ರ ಸರ್ಕಾರದ ಆದೇಶದಲ್ಲಿ 2021-22ನೇ ಸಾಲಿಗೆ ರಾಜ್ಯದ ರೈತರಿಗೆ ಪತ್ತಿನ ಸಹಕಾರಿ ಸಂಸ್ಥೆಗಳ ಮೂಲಕ ಶೂನ್ಯ ಬಡ್ಡಿ ದರದಲ್ಲಿ ರೂ.3.00 ಲಕ್ಷಗಳವರೆಗೆ ಅಲ್ಪಾವಧಿ ಕೃಷಿ ಸಾಲ ಮತ್ತು ಗರಿಷ್ಠ ರೂ.2.00 ಲಕ್ಷಗಳವರೆಗೆ ಪಶುಸಂಗೋಪನೆ ಮತ್ತು ಮೀನುಗಾರಿಕೆ ದುಡಿಯುವ ಬಂಡವಾಳ ಸಾಲ ನೀಡುವ ಯೋಜನೆಯನ್ನು ಜಾರಿಗೊಳಿಸಲು ಸರ್ಕಾರ ಮಂಜೂರಾತಿ ನೀಡಿ ಆದೇಶಿಸಿದೆ.

ಮೇಲೆ ಓದಲಾದ ಕ್ರ.ಸಂ (3) ರ ಸಹಕಾರ ಸಂಘಗಳ ನಿಬಂಧಕರ ಪತ್ರದಲ್ಲಿ, 2022-23 ನೇ ಸಾಲಿಗೆ ಸಹಕಾರ ಸಂಸ್ಥೆಗಳು ವಿತರಿಸಬೇಕಾದ ಕೃಷಿ ಸಾಲದ ಗುರಿಯನ್ನು ನಿಗದಿಪಡಿಸಿ ಯೋಜನೆ ಅನುಷ್ಠಾನಗೊಳಿಸಲು ಸರ್ಕಾರಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, 2022-23ನೇ ಸಾಲಿಗೆ ಯೋಜನೆಯನ್ನು ಅನುಷ್ಠಾನಗೊಳಿಸಲು ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಒ 150 ಸಿಎಲ್‌ಎಸ್ 2022, ದಿನಾಂಕ: 08.04.2022.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಜ್ಯದ ರೈತರಿಗೆ ಸಹಕಾರಿ ಸಂಸ್ಥೆಗಳು ನಿವ್ವಳ ಶೂನ್ಯ ಬಡ್ಡಿದರ ಅನ್ವಯವಾಗುವಂತೆ ಗರಿಷ್ಠ ರೂ.3.00 ಲಕ್ಷದವರೆಗಿನ ಅಲ್ಪಾವಧಿ ಕೃಷಿ ಸಾಲ ಮತ್ತು ಗರಿಷ್ಠ ರೂ.2.00 ಲಕ್ಷಗಳವರೆಗೆ ಪಶುಸಂಗೋಪನೆ ಮತ್ತು ಮೀನುಗಾರಿಕೆ ದುಡಿಯುವ ಬಂಡವಾಳ ಸಾಲ ನೀಡುವ ಯೋಜನೆ ಈ ಎರಡು ಯೋಜನೆಗಳನ್ನು 2022-23ನೇ ಸಾಲಿನಲ್ಲಿ ವಿಲೀನಗೊಳಿಸಿ ಕೆಳಕಂಡ ಷರತ್ತುಗಳೊಂದಿಗೆ ಜಾರಿಗೊಳಿಸಲು ಸರ್ಕಾರ ಮಂಜೂರಾತಿ ನೀಡಿ ಆದೇಶಿಸಿದೆ.

**<u>ಷರತ್ತುಗಳು</u>**

1. ಈ ಯೋಜನೆಯು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಸ್ಥೆಗಳು, ಟಿಬೇಟಿಯನ್ ಸಹಕಾರ ಸಂಸ್ಥೆಗಳು, ಲ್ಯಾಂಪ್ಸ್ ಸಹಕಾರ ಸಂಘಗಳು, ಪಿಕಾರ್ಡ್ ಬ್ಯಾಂಕುಗಳು ರೈತರಿಗೆ / ಮೀನುಗಾರರಿಗೆ ವಿತರಿಸುವ ಅಲ್ಪಾವಧಿ ಬೆಳೆ ಸಾಲ, ಪಶುಸಂಗೋಪನೆ ಮತ್ತು ಮೀನುಗಾರಿಕೆ ದುಡಿಯುವ ಬಂಡವಾಳ ಸಾಲಗಳಿಗೆ ಅನ್ವಯಿಸುತ್ತದೆ.

2. ಈ ಯೋಜನೆಯು ಒಬ್ಬ ಫಲಾನುಭವಿಗೆ ಗರಿಷ್ಟ ರೂ.3.00 ಲಕ್ಷಗಳವರೆಗೆ ನೀಡುವ ಅಲ್ಪಾವಧಿ ಬೆಳೆ ಸಾಲ ಹಾಗೂ ಪಶುಸಂಗೋಪನೆ ಮತ್ತು ಮೀನುಗಾರಿಕೆಗಾಗಿ ದುಡಿಯುವ ಬಂಡವಾಳ ಸಾಲಕ್ಕಾಗಿ ಗರಿಷ್ಟ ರೂ.2.00 ಲಕ್ಷಗಳವರೆಗೆ ವಿತರಿಸುವ ಸಾಲಗಳಿಗೆ ಮಾತ್ರ ಅನ್ವಯವಾಗುತ್ತದೆ. ಪಶುಸಂಗೋಪನೆ ಮತ್ತು ಮೀನುಗಾರಿಕೆ ದುಡಿಯುವ ಬಂಡವಾಳಕ್ಕಾಗಿ ರೂ.2.00 ಲಕ್ಷದವರೆಗೆ ಸಾಲ ಪಡೆದು ಬೆಳೆ ಸಾಲ ಪಡೆಯಬೇಕಾದಲ್ಲಿ ಬೆಳೆ ಸಾಲ, ಪಶುಸಂಗೋಪನೆ ಮತ್ತು ಮೀನುಗಾರಿಕೆ ದುಡಿಯುವ ಬಂಡವಾಳ ಉದ್ದೇಶಕ್ಕೆ ಒಟ್ಟು ರೂ.3.00 ಲಕ್ಷಗಳಿಗೆ ಮೀರತಕ್ಕದ್ದಲ್ಲ.

3. ರೂ.3.00 ಲಕ್ಷಗಳಿಗಿಂತ ಹೆಚ್ಚಿನ ಸಾಲ ಪಡೆದಿದ್ದರೂ ಸಹ ರೂ.3.00 ಲಕ್ಷಗಳ ಹೊರಬಾಕಿಗೆ ರಿಯಾಯಿತಿ ಬಡ್ಡಿ ದರ ಅನ್ವಯವಾಗುತ್ತದೆ.

4. ಸಹಕಾರ ಸಂಘಗಳು ರೈತರಿಗೆ ಕೇಂದ್ರ ಸರ್ಕಾರ ನಿಗಧಿಪಡಿಸಿದ ಮಾನದಂಡಗಳನ್ವಯ ಶೇ.7.00 ರ ಬಡ್ಡಿದರದಲ್ಲಿ ಸಾಲ ವಿತರಿಸಬೇಕು. ಸಾಲ ಒದಗಿಸುವ ಬ್ಯಾಂಕುಗಳು ತಮ್ಮ ಅಧೀನ ಸಂಘಗಳಿಗೆ ಆಕರಣೆ ಮಾಡಬೇಕಾದ ಬಡ್ಡಿದರ ಮತ್ತು ಸರ್ಕಾರದ ಬಡ್ಡಿ ಸಹಾಯಧನ ದರ ಈ ಕೆಳಕಂಡಂತಿರುತ್ತದೆ.

I. ಅಪೆಕ್ಸ್ ಬ್ಯಾಂಕ್ ನಬಾರ್ಡ್‌ನಿಂದ ರಿಯಾಯತಿ ಬಡ್ಡಿದರದಲ್ಲಿ ಪಡೆದ ಸಾಲಕ್ಕೆ (ಶೇ.4.50) ಅಪೆಕ್ಸ್ ಬ್ಯಾಂಕ್ ತನ್ನ ಮಾರ್ಜಿನ್ ದರ ಶೇ.0.40 ನ್ನು ಸೇರಿಸಿ ಒಟ್ಟಾರೆ ಶೇ.4.90 ರ ಬಡ್ಡಿ ಆಕರಣೆ ಮಾಡಿ ಡಿಸಿಸಿ ಬ್ಯಾಂಕುಗಳಿಗೆ ಸಾಲ ವಿತರಿಸಬೇಕು. ಅಪೆಕ್ಸ್ ಬ್ಯಾಂಕ್ ತನ್ನ ಸ್ವಂತ ಬಂಡವಾಳದಲ್ಲಿ ವಿತರಿಸಿದ ಸಾಲಗಳಿಗೆ ತನ್ನ ಯುಕ್ತ ಬಡ್ಡಿದರದಲ್ಲಿ ಸಾಲ ವಿತರಿಸುವುದು. ಕೇಂದ್ರ ಸರ್ಕಾರದಿಂದ ಲಭ್ಯವಾಗುವ ಶೇ.2 ರ Interest Subvention ಮೊತ್ತವನ್ನು ಡಿಸಿಸಿ ಬ್ಯಾಂಕುಗಳೇ ಪಡೆಯುವಂತೆ ಬಡ್ಡಿದರ ನಿಗದಿಪಡಿಸಬೇಕು. ನಬಾರ್ಡ್‌ನಿಂದ ಹೆಚ್ಚುವರಿ ದರದಲ್ಲಿ ಮತ್ತು Special Liquidity Fund ಅಡಿಯಲ್ಲಿ ಪಡೆದ ಸಾಲಗಳಿಗೆ ಶೇ.0.25 ಮಾರ್ಜಿನ್ ಮಾತ್ರ ಅಪೆಕ್ಸ್ ಬ್ಯಾಂಕ್ ಆಕರಿಸತಕ್ಕದ್ದು.

II. ಡಿಸಿಸಿ ಬ್ಯಾಂಕುಗಳು ಪ್ಯಾಕ್ಸ್ ಗಳಿಗೆ ಶೇ.6.60 ರ ಬಡ್ಡಿ ದರವನ್ನು ಮತ್ತು ವಾಣಿಜ್ಯ ಬ್ಯಾಂಕುಗಳು ಪ್ಯಾಕ್ಸ್ ಗಳಿಗೆ ಶೇ.6.10 ರ ಬಡ್ಡಿ ಆಕರಣೆ ಮಾಡಿ ಸಾಲ ವಿತರಿಸತಕ್ಕದ್ದು. ಇದಕ್ಕಾಗಿ ಕೇಂದ್ರ ಸರ್ಕಾರ ನೀಡುವ ಶೇ.2.00 ರ ಬಡ್ಡಿ ಸಹಾಯಧನವನ್ನು ಡಿಸಿಸಿ ಬ್ಯಾಂಕುಗಳು/ವಾಣಿಜ್ಯ ಬ್ಯಾಂಕುಗಳು ಪಡೆಯತಕ್ಕದ್ದು, ನಿಗದಿತ ಅವಧಿಯಲ್ಲಿ ವಸೂಲಾದ ಸಾಲಗಳಿಗೆ ಪ್ಯಾಕ್ಸ್ ಗಳಿಂದ ಯಾವುದೇ ಬಡ್ಡಿಯನ್ನು ವಸೂಲು ಮಾಡಬಾರದು. ರೈತರ ಪರವಾಗಿ ರಾಜ್ಯ/ಕೇಂದ್ರ ಸರ್ಕಾರದಿಂದ ಬಿಡುಗಡೆ ಮಾಡಿದ ಬಡ್ಡಿ ಸಹಾಯಧನದಿಂದ ಡಿಸಿಸಿ ಬ್ಯಾಂಕುಗಳು/ವಾಣಿಜ್ಯ ಬ್ಯಾಂಕುಗಳು ಬಡ್ಡಿ ಜಮಾ ಪಡೆಯತಕ್ಕದ್ದು.

III. ಪ್ಯಾಕ್ಸ್‌ಗಳ ಹಂತದಲ್ಲಿ, ಪ್ಯಾಕ್ಸ್‌ಗಳು ರೈತರಿಗೆ ಕೇಂದ್ರ ಸರ್ಕಾರ ನಿಗದಿಪಡಿಸಿದ (ಶೇ.7) ಬಡ್ಡಿದರ ಆಕರಿಸಿ ಸಾಲ ವಿತರಿಸತಕ್ಕದ್ದು. ರೈತರು ನಿಗದಿತ ಅವಧಿಯಲ್ಲಿ ಸಾಲ ಮರುಪಾವತಿಸಿದಲ್ಲಿ ಕೇಂದ್ರ ಸರ್ಕಾರವು ನೀಡುವ ಶೇ.3.00ರ ಪ್ರೋತ್ಸಾಹಧನ (prompt payers incentive)ದ ಮಾದರಿಯಲ್ಲಿಯೇ, ರಾಜ್ಯ ಸರ್ಕಾರದ ಶೇ.4.00 ರ ಬಡ್ಡಿ ಸಹಾಯಧನವನ್ನು ರೈತರ ಖಾತೆಗೆ ಸಹಕಾರ ಸಂಘಗಳು ಮೊದಲು ಜಮಾ ನೀಡಿ ರಾಜ್ಯ ಸರ್ಕಾರದಿಂದ ಕ್ಲೇಮು ಮಾಡತಕ್ಕದ್ದು. ಇದರಿಂದ ರೈತರಿಗೆ ನಿವ್ವಳ ಶೂನ್ಯ ಬಡ್ಡಿದರ ಅನ್ವಯವಾಗುತ್ತದೆ.

IV. ರಾಜ್ಯ ಸರ್ಕಾರದಿಂದ ಶೇ.4.00 ರ ಬಡ್ಡಿ ಸಹಾಯಧನದ ಜೊತೆಯಲ್ಲಿ ಮೂರು ಹಂತದ ಸಂಘಗಳ ಆಡಳಿತ ವೆಚ್ಚ ಸರಿದೂಗಿಸಲು ಶೇ.1.60 ರ ಹೆಚ್ಚಿನ ಬಡ್ಡಿ ಸಹಾಯಧನ ಒಟ್ಟಾರೆ ಶೇ.5.60 ರಷ್ಟು ಬಡ್ಡಿ ಸಹಾಯಧನವನ್ನು ನೀಡಲಿದ್ದು, ಇದರಲ್ಲಿ ಶೇ.2.00 ಪ್ಯಾಕ್ಸ್ ಗಳಿಗೆ ಸಹಾಯಧನ ಹಾಗೂ ಉಳಿದ ಶೇ.3.60 ಬಡ್ಡಿ ಸಹಾಯಧನವನ್ನು ಡಿಸಿಸಿ ಬ್ಯಾಂಕುಗಳ ಮಾರ್ಜಿನ್ ಆಗಿ ನಿಗಧಿಪಡಿಸಲಾಗಿದೆ.

V. ವಾಣಿಜ್ಯ ಬ್ಯಾಂಕುಗಳಿಗೆ ಅಧ್ಯರ್ಪಿತಗೊಂಡ ಸಹಕಾರ ಸಂಘಗಳು ಶೇ.5.10 (5.60-0.50) ರ ಬಡ್ಡಿ ಸಹಾಯಧನವನ್ನು ರಾಜ್ಯ ಸರ್ಕಾರದಿಂದ ನೀಡಲಾಗುವುದು. ಇದರಲ್ಲಿ ಪ್ಯಾಕ್ಸ್‌ಗಳಿಗೆ ಶೇ.2.00 ಮಾರ್ಜಿನ್ ನೀಡಿ ಉಳಿದ ಶೇ.3.10 ಬಡ್ಡಿ ಸಹಾಯಧನದ ಮೊತ್ತವನ್ನು ವಾಣಿಜ್ಯ ಬ್ಯಾಂಕುಗಳು ಪಡೆದುಕೊಳ್ಳತಕ್ಕದ್ದು.

VI. ಡಿಸಿಸಿ ಬ್ಯಾಂಕುಗಳು ತಮ್ಮ ಶಾಖೆಗಳ ಮೂಲಕ ನೇರವಾಗಿ ಸಾಲ ವಿತರಿಸಿದಲ್ಲಿ ಶೇ.4.70 ಬಡ್ಡಿ ಸಹಾಯಧನವನ್ನು ರಾಜ್ಯ ಸರ್ಕಾರದಿಂದ ನೀಡಲಾಗುವುದು.

VII. ನಬಾರ್ಡ್ ಪುನರ್ಧನದ ಬಡ್ಡಿ ದರಗಳು, ಕೇಂದ್ರ ಸರ್ಕಾರದ ಬಡ್ಡಿ ಸಹಾಯಧನ ಮತ್ತು ಡಿಸಿಸಿ ಬ್ಯಾಂಕುಗಳ ಠೇವಣಿಗಳ ವೆಚ್ಚ ಬದಲಾದಲ್ಲಿ ರಾಜ್ಯ ಸರ್ಕಾರ ಬಡ್ಡಿ ಸಹಾಯಧನ ಮತ್ತು ವಿವಿಧ ಹಂತದ ಸಹಕಾರ ಸಂಸ್ಥೆಗಳ ಮಾರ್ಜಿನ್ ಬದಲಾವಣೆ ಮಾಡಿದಲ್ಲಿ ಅದಕ್ಕೆ ಸಹಕಾರ ಸಂಘಗಳು ಬದ್ಧರಾಗಿರತಕ್ಕದ್ದು. ನಬಾರ್ಡ್

ವಿವಿಧ ಶೀರ್ಷಿಕೆಯಡಿ ನೀಡುವ ಪುನರ್ಧನವನ್ನು ಸಂಪೂರ್ಣವಾಗಿ ಬಳಕೆ ಮಾಡಿಕೊಳ್ಳಬೇಕು, ಇದರ ಆಧಾರದ ಮೇಲೆ ಬಡ್ಡಿ ಸಹಾಯಧನ ದರ ನಿಗದಿಪಡಿಸಲಾಗುವುದು.

5. ಬಡ್ಡಿ ಸಹಾಯಧನವು ಒಂದು ಸಹಕಾರ ಸಂಘದಲ್ಲಿ ಪಡೆದ ಸಾಲಕ್ಕೆ ಮಾತ್ರ ಅನ್ವಯವಾಗುತ್ತದೆ. ರೈತನ ವಾಸ ಸ್ಥಳ ಮತ್ತು ಭೂಮಿ ಒಂದೇ ಸಂಘದ ವ್ಯಾಪ್ತಿಯಲ್ಲಿದ್ದರೆ ಇತರೇ ಯಾವುದೇ ಸಂಘದ ಬೇ ಬಾಕಿ ಪತ್ರ ಪಡೆಯಬೇಕಿಲ್ಲ.

ರೈತನ ಭೂಮಿ ಮತ್ತು ವಾಸ ಸ್ಥಳ ಬೇರೆ ಬೇರೆ ಸಂಘದ ವ್ಯಾಪ್ತಿಯಲ್ಲಿದ್ದರೆ ಅಥವಾ ಎರಡು ಸಹಕಾರ ಸಂಘಗಳ ವ್ಯಾಪ್ತಿಯಲ್ಲಿ ಬೇರೆ ಬೇರೆ ಭೂಮಿ ಹೊಂದಿದ್ದರೆ, ರೈತನು ಸಾಲಕ್ಕಾಗಿ ಅರ್ಜಿ ಸಲ್ಲಿಸಿದ ಸಂಘವು ರೈತನು ಹೊಂದಿರುವ ಒಟ್ಟಾರೆ ಭೂಮಿಯ ವಿವರವನ್ನು ಪಡೆದು, ವಾಸ ಸ್ಥಳದ ಸಂಘ ಮತ್ತು ರೈತನ ಇತರೆ ಭೂಮಿಯ ಸಂಘದಿಂದ ಬೇ ಬಾಕಿ ಪತ್ರ ಪಡೆದು ಅದೇ ಸಂಘದಲ್ಲಿ ಇತರೇ ಸಂಘದ ವ್ಯಾಪ್ತಿಯ ಭೂಮಿಗೂ ಸಹ ಸಾಲ ವಿತರಿಸಬಹುದಾಗಿದೆ ಮತ್ತು ಬೇ ಬಾಕಿ ಪತ್ರ ಪಡೆಯುವುದು ಸಂಘದ ಜವಾಬ್ದಾರಿಯಾಗಿರುತ್ತದೆ.

ಆಧಾರ್ ಕಾರ್ಡ್‌ನಲ್ಲಿರುವ ವಿಳಾಸವನ್ನು ವಾಸ ಸ್ಥಳ ಎಂದು ಪರಿಗಣಿಸತಕ್ಕದ್ದು. ರೈತನು ನೆರೆ ರಾಜ್ಯದಲ್ಲಿ ವಾಸವಿದ್ದು, ಕರ್ನಾಟಕ ರಾಜ್ಯದಲ್ಲಿ ಭೂಮಿ ಇದ್ದರೆ, ಅಂತಹ ರೈತನಿಗೆ ಈ ಯೋಜನೆ ಅನ್ವಯವಾಗುವುದಿಲ್ಲ.

6. ರೈತರಿಗೆ ಸಾಲ ಮತ್ತು ಸಹಾಯಧನವನ್ನು ಅವರು ಡಿಸಿಸಿ ಬ್ಯಾಂಕ್ ಅಥವಾ ವಾಣಿಜ್ಯ ಬ್ಯಾಂಕಿನಲ್ಲಿ ಹೊಂದಿರುವ ಸಾಲ/ಉಳಿತಾಯ ಖಾತೆಯ ಮೂಲಕವೇ ವಿತರಿಸತಕ್ಕದ್ದು. ಸಾಲ ಮತ್ತು ಸಹಾಯಧನವನ್ನು ಸಂಘಗಳ ಹಂತದಲ್ಲಿ ನಗದು ಮೂಲಕ ಪಾವತಿಸುವುದನ್ನು ನಿರ್ಬಂಧಿಸಲಾಗಿದೆ.

7. ರಾಜ್ಯ ಸರ್ಕಾರದ/ಕೇಂದ್ರ ಸರ್ಕಾರದ ಬಡ್ಡಿ ಸಹಾಯಧನವನ್ನು ಪಡೆಯಲು ರೈತರ ಆಧಾರ್ ಕಾರ್ಡ್ ಸಂಖ್ಯೆಯನ್ನು ಪ್ಯಾಕ್ಸ್ ಸಂಯೋಜನೆಗೊಂಡಿರುವ ಬ್ಯಾಂಕ್‌ನಲ್ಲಿರುವ ರೈತರ ಉಳಿತಾಯ ಖಾತೆಗೆ ಜೋಡಣೆ ಮಾಡತಕ್ಕದ್ದು. ಇದಕ್ಕಾಗಿ ತಮ್ಮ ಸಾಲದ ದಾಖಲೆಗಳಲ್ಲಿ ತಪ್ಪದೇ ಆಧಾರ ಕಾರ್ಡ್‌ನ ನಕಲು ಪ್ರತಿ ಮತ್ತು ಆಧಾರ್ ಕಾರ್ಡ್ ಬಳಕೆಯ ಘೋಷಣಾ ಪತ್ರವನ್ನು ಪಡೆಯತಕ್ಕದ್ದು.

8. ರಾಜ್ಯ ಸರ್ಕಾರದಿಂದ ಸಹಕಾರ ಸಂಘಗಳು ನಿಗದಿಪಡಿಸಿದ ಗಡುವು ದಿನಾಂಕ ಅಥವಾ ಗರಿಷ್ಠ ಒಂದು ವರ್ಷ ಇದರಲ್ಲಿ ಯಾವುದು ಕಡಿಮೆಯೋ ಆ ಅವಧಿಗೆ ಮಾತ್ರ ಬಡ್ಡಿ ಸಹಾಯಧನ ದೊರೆಯಲಿದ್ದು, ರೈತರು ಈ ದಿನಾಂಕದೊಳಗೆ ಸಾಲ ಮರುಪಾವತಿಸಿದಲ್ಲಿ ಮಾತ್ರ ಬಡ್ಡಿ ಸಹಾಯಧನಕ್ಕೆ ಅರ್ಹರಾಗುತ್ತಾರೆ. ಒಬ್ಬ ರೈತನಿಗೆ ಎರಡನೇ ಬಾರಿ ಹೆಚ್ಚುವರಿ ಸಾಲ ವಿತರಿಸಿದಲ್ಲಿ ಮೊದಲು ವಿತರಿಸಿದ ಸಾಲಕ್ಕೆ ಸಂಬಂಧಿಸಿದ ಗಡುವನ್ನೇ ನಿಗದಿಪಡಿಸತಕ್ಕದ್ದು.

9. ರಾಜ್ಯ ಮಟ್ಟದ ತಾಂತ್ರಿಕ ಸಮಿತಿಯಿಂದ ನಿಗದಿಪಡಿಸಿದ ಸ್ಕೇಲ್ ಆಫ್ ಫೈನಾನ್ಸ್ ಮತ್ತು ಬೆಳೆ ವಿಮೆ ಆಧಾರದ ಮೇಲೆ ಮಂಜೂರಾದ ಸಾಲದ ಮಿತಿಗೆ ಮಾತ್ರ ಬಡ್ಡಿ ಸಹಾಯಧನ ಅನ್ವಯವಾಗುವುದು. ಕೊಯ್ಲು ನಂತರದ (Post harvest) ಹಾಗೂ ಇತರೆ ಉದ್ದೇಶಗಳಿಗೆ ನೀಡುವ ಸಾಲಗಳಿಗೆ ಬಡ್ಡಿ ಸಹಾಯಧನ ಅನ್ವಯವಾಗುವುದಿಲ್ಲ.

10. ಈ ಬಡ್ಡಿದರವು ದಿನಾಂಕ:01.04.2022 ರಿಂದ ದಿನಾಂಕ: 31.03.2023 ರವರೆಗೆ ಮಂಜೂರು ಮಾಡಿ ವಿತರಿಸಿದ ಅಲ್ಪಾವಧಿ ಕೃಷಿ ಸಾಲಗಳಿಗೆ ಮಾತ್ರ ಅನ್ವಯವಾಗುತ್ತದೆ.

11. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಸ್ಥಗಿತ/ಸಮಾಪನೆಗೊಂಡಿದ್ದಲ್ಲಿ ಹಾಗೂ ಬಂಡವಾಳ ಕೊರತೆಯುಂಟಾಗಿದ್ದರೆ, ಅಂತಹ ಕಾರ್ಯವ್ಯಾಪ್ತಿಯಲ್ಲಿನ ರೈತರಿಗೆ ಡಿಸಿಸಿ ಬ್ಯಾಂಕಿನ ಶಾಖೆಗಳ ಮೂಲಕ ಸಾಲ ವಿತರಿಸತಕ್ಕದ್ದು.

12. ಪತ್ತಿನ ಸಹಕಾರ ಸಂಘಗಳು/ಬ್ಯಾಂಕುಗಳು ತಮಗೆ ದೊರೆಯಬೇಕಾದ ಬಡ್ಡಿ ಸಹಾಯಧನದ ಮತ್ತು ರೈತರಿಗೆ ದೊರೆಯಬೇಕಾದ ಬಡ್ಡಿ ಪ್ರೋತ್ಸಾಹಧನದ ಬಿಲ್ಲುಗಳನ್ನು ಪ್ರತಿ ತ್ರೈಮಾಸಿಕವಾಗಿ ಸಾಲ ವಸೂಲಾತಿ ಆಧಾರವಾಗಿ ತಯಾರಿಸತಕ್ಕದ್ದು.

13. ಈ ಬಿಲ್ಲುಗಳನ್ನು ಡಿಸಿಸಿ ಬ್ಯಾಂಕಿನ ವ್ಯವಸ್ಥಾಪಕರು ಮತ್ತು ತಾಲ್ಲೂಕು ಅಭಿವೃದ್ಧಿ ಅಧಿಕಾರಿ ಶೇ.100 ರಷ್ಟು ಬಿಲ್ಲುಗಳನ್ನು ದೃಢೀಕರಿಸಿ, ನಂತರ ಡಿಸಿಸಿ ಬ್ಯಾಂಕ್‌ಗಳು ಕ್ರೋಢೀಕರಿಸಿ, ಜಿಲ್ಲಾ ಉಪ ನಿಬಂಧಕರು ಮತ್ತು ಡಿಸಿಸಿ ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶೇ.5 ರಷ್ಟು ಸಂಘಗಳ ಶೇ.10 ಖಾತೆಗಳನ್ನು ಪರಿಶೀಲಿಸಿ, ದೃಢೀಕರಿಸಿದ ನಂತರ ಅಪೆಕ್ಸ್ ಬ್ಯಾಂಕ್ ಮೂಲಕ ನಿಬಂಧಕರಿಗೆ ಸಲ್ಲಿಸತಕ್ಕದ್ದು.

14. ನಿಬಂಧಕರು ಇದರ ಆಧಾರದ ಮೇಲೆ ಸರ್ಕಾರದಿಂದ ಅನುದಾನ ಪಡೆದು ಸಹಕಾರ ಸಂಘಗಳಿಗೆ ಬಿ[illegible]ತ್ತೆ ಮಾಡತಕ್ಕದ್ದು, ಮತ್ತು ಬಳಿಕ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.

15. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಬಿಲ್ಲುಗಳಿಗೆ ಸಂಬಂಧಿಸಿದಂತೆ ಬಿಡುಗಡೆ ಮಾಡುವ ಬಡ್ಡಿ ಸಹಾಯಧನದ ರೈತವಾರು ಮಾಹಿತಿಯನ್ನು ಸಮಾಜ ಕಲ್ಯಾಣ ಇಲಾಖೆಯ ವೆಬ್ ಸೈಟ್ **sw.kar.nic.in** ನಲ್ಲಿ ಪ್ರತಿ ತಾಲ್ಲೂಕಿನ ಸಹಕಾರ ಅಭಿವೃದ್ಧಿ ಅಧಿಕಾರಿಗಳಿಗೆ ನೀಡಿದ ಲಾಗಿನ್ ಬಳಸಿ ಒಂದು ತಿಂಗಳೊಳಗಾಗಿ ಅಳವಡಿಸುವುದು ಕಡ್ಡಾಯವಾಗಿರುತ್ತದೆ. ಇದಕ್ಕಾಗಿ ಸರ್ಕಾರದಿಂದ ರೈತರ ಖಾತೆಗೆ/ಸಹಕಾರ ಸಂಘಗಳಿಗೆ ಬಿಡುಗಡೆ ಮಾಡುವ ಮಾಹಿತಿಯನ್ನು ಡಿಸಿಸಿ ಬ್ಯಾಂಕುಗಳ ಶಾಖಾ ವ್ಯವಸ್ಥಾಪಕರು ಸಹಕಾರ ಸಂಘಗಳ ಸಹಕಾರ ಅಭಿವೃದ್ಧಿ ಅಧಿಕಾರಿಗಳಿಗೆ ನೀಡಿ ತಂತ್ರಾಂಶದಲ್ಲಿ ನಮೂದು (Entry) ಮಾಡಲು ಕ್ರಮ ವಹಿಸಬೇಕು.

16. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಅಂದರೆ, 01-04-2022 ರಿಂದ 31-03-2023 ರವರೆಗೆ ನಬಾರ್ಡ್ ಸಂಸ್ಥೆಗೆ ಸಲ್ಲಿಸಿದ PLP (Potential Linked Plan) ಅನ್ವಯ ಅಲ್ಪಾವಧಿ ಕೃಷಿ ಸಾಲಗಳಿಗೆ ಮತ್ತು ಪಶುಸಂಗೋಪನೆ ಮತ್ತು ಮೀನುಗಾರಿಕೆಗೆ ರೂ.22,337.00 ಕೋಟಿಗಳ ಸಾಲವನ್ನು 32.36 ಲಕ್ಷ ರೈತರಿಗೆ ವಿತರಿಸಲು ಗುರಿ ನಿಗದಿಪಡಿಸಲಾಗಿದೆ. ಸಾಲ ವಿತರಣೆಯಲ್ಲಿ 2.72 ಲಕ್ಷ ಹೊಸ ಸದಸ್ಯರಿಗೆ ಮತ್ತು ಒಟ್ಟಾರೆ ಸಾಲದ ಶೇ. 24.10 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಪ್ರತ್ಯೇಕವಾಗಿ ಗುರಿ ನಿಗಧಿಪಡಿಸತಕ್ಕದ್ದು ಹಾಗೂ ಜಿಲ್ಲೆಯಲ್ಲಿರುವ ಈ ವರ್ಗದ ರೈತರ ಅನುಪಾತಕ್ಕೆ ಕಡಿಮೆ ಇಲ್ಲದಂತೆ ಸಾಲ ವಿತರಿಸತಕ್ಕದ್ದು ಮತ್ತು ಯಾವುದೇ ವಿಧಾನ ಸಭಾ ಕ್ಷೇತ್ರಗಳಿಗೆ ತಾರತಮ್ಯ ಮಾಡಬಾರದು.

17. ಸಹಕಾರ ಸಂಘಗಳ ನಿಬಂಧಕರು ಈ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಅಗತ್ಯವಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳತಕ್ಕದ್ದು ಮತ್ತು ಅಗತ್ಯವಾದ ಮಾರ್ಗದರ್ಶನ ನೀಡಲು ಸಕ್ಷಮರಾಗಿರತಕ್ಕದ್ದು.

18. ಈ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕಾಲಕಾಲಕ್ಕೆ ಸರ್ಕಾರ ಮತ್ತು ಸಹಕಾರ ಸಂಘಗಳ ನಿಬಂಧಕರು ನೀಡುವ ಸೂಚನೆಗಳನ್ನು ಸಂಬಂಧಿಸಿದ ಎಲ್ಲಾ ಸಹಕಾರ ಸಂಸ್ಥೆಗಳು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: 48 ವೆಚ್ಚ 2/2022, ದಿನಾಂಕ: 07-04-2022ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಂ. ವೆಂಕಟಸ್ವಾಮಿ)
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಸಹಕಾರ ಇಲಾಖೆ

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು, ಇವರಿಗೆ ಕರ್ನಾಟಕ ರಾಜ್ಯಪತ್ರದಲ್ಲಿ ಕೂಡಲೇ ಪ್ರಕಟಿಸಿ, ಅದರ 100 ಪ್ರತಿಗಳನ್ನು ಒದಗಿಸಲು ಕೋರಿದೆ.

**ಪ್ರತಿಗಳು :**

1. ಸನ್ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಮಹಾಲೇಖಪಾಲರು, ಕರ್ನಾಟಕ ರಾಜ್ಯ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನಾ ಇಲಾಖೆ, ಬಹುಮಹಡಿ ಕಟ್ಟಡ,
6. ಸಹಕಾರ ಸಂಘಗಳ ನಿಬಂಧಕರು, ನಂ.1, ಆಲಿ ಅಸ್ಕರ್ ರಸ್ತೆ, ಬೆಂಗಳೂರು-52.
7. ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕರು, ಶಂಕರಮಠ ರಸ್ತೆ, ಬಸವನಗುಡಿ, ಬೆಂ-04.
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ 2&10), ವಿಧಾನ ಸೌಧ, ಬೆಂಗಳೂರು.

[illegible], ಕರ್ನಾಟಕ ರಾಜ್ಯ [illegible] ನಿ., [illegible], [illegible] ಬೆಂಗಳೂರು-5.

10. [illegible] ನಿರ್ದೇಶಕರು, ಕರ್ನಾಟಕ ರಾಜ್ಯ [illegible] ನಿ., [illegible], ಬೆಂಗಳೂರು-13.

11. ಜಿಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರು.
12. ಎಲ್ಲಾ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರು.
13. ಎಲ್ಲಾ ಜಿಲ್ಲಾ ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಉಪ ನಿರ್ದೇಶಕರು. [illegible]
14. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ., ಕೆಂಗಲ್ ಹನುಮಂತಯ್ಯ ರಸ್ತೆ, ಬೆಂಗಳೂರು.
15. ಮಾನ್ಯ ಸಹಕಾರ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು
16. ಆಂತರಿಕ ಆರ್ಥಿಕ ಸಲಹೆಗಾರರು, ಸಹಕಾರ ಇಲಾಖೆ, ಬಹುಮಹಡಿ ಕಟ್ಟಡ.
17. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಹಕಾರ ಇಲಾಖೆ.
18. ಸರ್ಕಾರದ ಅಧೀನ ಕಾರ್ಯದರ್ಶಿ-3, ಸಹಕಾರ ಇಲಾಖೆ
19. ರಾಜ್ಯ ಹುಜೂರು ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
20. ರಾಜ್ಯ ಖಜಾನಾಧಿಕಾರಿ, ಜೆ.ಸಿ ರಸ್ತೆ, ಬೆಂಗಳೂರು
21. ಶಾಖಾ ರಕ್ಷಾ ಕಡತ:ಹೆಚ್ಚುವರಿ ಪ್ರತಿ

***

ವಿಷಯ: 2022-23 ನೇ ಸಾಲಿನಲ್ಲಿ ರಾಜ್ಯದ ರೈತರಿಗೆ ಪತ್ತಿನ ಸಹಕಾರಿ ಸಂಸ್ಥೆಗಳ ಮೂಲಕ ರಿಯಾಯಿತಿ ಬಡ್ಡಿದರದಲ್ಲಿ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಮತ್ತು ಕೃಷಿ ಸಂಬಂಧಿತ ಸಾಲ ವಿತರಿಸುವ ಬಗ್ಗೆ.

ಓದಲಾಗಿದೆ:
1. 2022-23 ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ ಸಂಖ್ಯೆ 68.
2. ಸರ್ಕಾರದ ಆದೇಶ ಸಂಖ್ಯೆ:ಸಿಒ 174 ಸಿಎಲ್‌ಎಸ್ 2021, ದಿನಾಂಕ:22.09.2021.
3. ಸಹಕಾರ ಸಂಘಗಳ ನಿಬಂಧಕರ ಪತ್ರ ಸಂಖ್ಯೆ: ಆರ್‌ಸಿಎಸ್/ಸಿಆರ್‌ಡಿ/ ಸಿಎಬಿ-1/ 99/2021-22, ದಿನಾಂಕ: ದಿನಾಂಕ:23.03.2022

***

**ಪ್ರಸ್ತಾವನೆ :**

ಮೇಲೆ ಓದಲಾದ ಕ್ರ.ಸಂ(1) ರಲ್ಲಿ 2022-23ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ 68 "ಸಹಕಾರ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸುತ್ತಿರುವ ಬಡ್ಡಿ ಸಹಾಯಧನ ಯೋಜನೆಯಡಿ 2021-22ನೇ ಸಾಲಿನಲ್ಲಿ ಇಲ್ಲಿಯತನಕ ಒಟ್ಟು 22.50 ಲಕ್ಷ ರೈತರಿಗೆ 16,355 ಕೋಟಿ ರೂ.ಗಳ ಕೃಷಿ ಸಾಲವನ್ನು ವಿತರಿಸಲಾಗಿದ್ದು, ಇದರಲ್ಲಿ 2.5 ಲಕ್ಷ ಹೊಸ ರೈತರಿಗೆ ಸಾಲ ವಿತರಿಸಲಾಗಿದೆ. 2022-23ನೇ ಸಾಲಿನಲ್ಲಿ ಒಟ್ಟು 33 ಲಕ್ಷ ರೈತರಿಗೆ 24,000 ಕೋಟಿ ರೂ.ಗಳ ಕೃಷಿ ಸಾಲವನ್ನು ವಿತರಿಸುವ ಗುರಿ ಹೊಂದಿದ್ದು, ಇದರಲ್ಲಿ 3 ಲಕ್ಷ ಹೊಸ ರೈತರಿಗೆ ಸಾಲವನ್ನು ನೀಡಲಾಗುವುದು" ಎಂದು ಘೋಷಿಸಲಾಗಿದೆ.

ಮೇಲೆ ಓದಲಾದ ಕ್ರ.ಸಂ(2)ರ ಸರ್ಕಾರದ ಆದೇಶದಲ್ಲಿ 2021-22ನೇ ಸಾಲಿಗೆ ರಾಜ್ಯದ ರೈತರಿಗೆ ಪತ್ತಿನ ಸಹಕಾರಿ ಸಂಸ್ಥೆಗಳ ಮೂಲಕ ಶೇ.3 ಬಡ್ಡಿ ದರದಲ್ಲಿ ರೂ.10.00 ಲಕ್ಷಗಳವರೆಗೆ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಮತ್ತು ಕೃಷಿ ಸಂಬಂಧಿತ ಸಾಲ ನೀಡುವ ಯೋಜನೆಯನ್ನು ಜಾರಿಗೊಳಿಸಲು ಸರ್ಕಾರ ಮಂಜೂರಾತಿ ನೀಡಿ ಆದೇಶಿಸಿದೆ.

ಮೇಲೆ ಓದಲಾದ ಕ್ರ.ಸಂ(3)ರ ಪತ್ರದಲ್ಲಿ, ರಾಜ್ಯದ ರೈತರಿಗೆ ಪತ್ತಿನ ಸಹಕಾರಿ ಸಂಸ್ಥೆಗಳ ಮೂಲಕ ಶೇ.3 ರ ಬಡ್ಡಿದರದಲ್ಲಿ ರೂ.10.00 ಲಕ್ಷಗಳವರೆಗೆ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಮತ್ತು ಕೃಷಿ ಸಂಬಂಧಿತ ಸಾಲ ನೀಡಲು 2022-23 ನೇ ಸಾಲಿನಲ್ಲಿ ಮುಂದುವರೆಸಿ ಆದೇಶ ಹೊರಡಿಸಲು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ, ರೈತರು ಕೃಷಿ ಅಭಿವೃದ್ಧಿ ಯೋಜನೆಗಳನ್ನು ಕೈಗೊಂಡು ಕೃಷಿ ಉತ್ಪಾದಕತೆ ಮತ್ತು ಆದಾಯವನ್ನು ಹೆಚ್ಚಿಸಲು ಅನುಕೂಲ ಮಾಡಿಕೊಡುವ ಸಲುವಾಗಿ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಒ 153 ಸಿಎಲ್‌ಎಸ್ 2022, ಬೆಂಗಳೂರು, ದಿನಾಂಕ: 08.04.2022

ರಾಜ್ಯದ ರೈತರಿಗೆ ಸಹಕಾರಿ ಸಂಸ್ಥೆಗಳು ಶೇ.3 ರ ಬಡ್ಡಿ ದರ ಅನ್ವಯವಾಗುವಂತೆ ಗರಿಷ್ಠ ರೂ.10.00 ಲಕ್ಷಗಳವರೆಗೆ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲ ನೀಡುವ ಯೋಜನೆಯನ್ನು ಕೆಳಕಂಡ ಷರತ್ತುಗಳಿಗೊಳಪಟ್ಟು ಜಾರಿಗೊಳಿಸಲು ಸರ್ಕಾರ ಮಂಜೂರಾತಿ ನೀಡಿ ಆದೇಶಿಸಿದೆ.

**ಷರತ್ತುಗಳು:**

1. ಈ ಯೋಜನೆಯು ಗೊತ್ತುಪಡಿಸಿದ ಕೃಷಿ ಪತ್ತಿನ ಸಹಕಾರಿ ಸಂಸ್ಥೆಗಳು ಅಂದರೆ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳು, ಟಿಬೇಟಿಯನ್ ಸಹಕಾರ ಸಂಸ್ಥೆಗಳು, ಲ್ಯಾಂಪ್ಸ್ ಸಹಕಾರ ಸಂಘಗಳು, ಪಿಕಾರ್ಡ್ ಬ್ಯಾಂಕುಗಳು ರೈತರಿಗೆ ನೇರವಾಗಿ ವಿತರಿಸುವ ಮಧ್ಯಮಾವಧಿ ಮತ್ತು

ದೀರ್ಘಾವಧಿ ಕೃಷಿ /ಕೃಷಿ ಸಂಬಂಧಿತ ಸಾಲಗಳಿಗೆ ಅನ್ವಯಿಸುತ್ತದೆ. (ಪಟ್ಟಣ ಸಹಕಾರ ಬ್ಯಾಂ r ) ನೀಡುವ ಸಾಲಗಳಿಗೆ ಈ ಯೋಜನೆ ಅನ್ವಯಿಸುವುದಿಲ್ಲ ಹಾಗೂ ಮೇಲಿನ ಸಂಸ್ಥೆಗಳು ಕಂಪನಿಗಳಿಗೆ ನೀಡುವ ಸಾಲಗಳಿಗೆ ಅನ್ವಯವಾಗುವುದಿಲ್ಲ). ಈ ಯೋಜನೆಯು ಪತ್ತಿನ ಸಹಕಾರಿ ಸಂಸ್ಥೆಗಳು ವಿತರಿಸುವ ಕೃಷಿಯೇತರ ಸಾಲಗಳಿಗೆ ಅನ್ವಯಿಸುವುದಿಲ್ಲ.

2. ಪತ್ತಿನ ಸಹಕಾರಿ ಸಂಸ್ಥೆಗಳು ತನ್ನ ರೈತ ಸದಸ್ಯರಿಗೆ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ/ಕೃಷಿ ಸಂಬಂಧಿತ ಸಾಲಗಳನ್ನು ನಿವ್ವಳ ಶೇಕಡಾ 3ರ ಬಡ್ಡಿ ದರದಲ್ಲಿ ಒದಗಿಸುವ ಯೋಜನೆಯು ರೂ.10.00 ಲಕ್ಷಗಳವರೆಗಿನ ಸಾಲಗಳಿಗೆ ಮಾತ್ರ ಅನ್ವಯವಾಗುತ್ತದೆ. ರೂ.10.00 ಲಕ್ಷಕ್ಕಿಂತ ಮೇಲ್ಪಟ್ಟ ಸಾಲಗಳಿಗೆ, ರೂ.10.00 ಲಕ್ಷಗಳ ಹೊರಬಾಕಿಗೆ ಬಡ್ಡಿ ಸಹಾಯಧನ ಅನ್ವಯವಾಗುತ್ತದೆ. ಒಬ್ಬ ಸಾಲಗಾರನಿಗೆ ವಿವಿಧ ಉದ್ದೇಶಗಳಿಗೆ ಸಾಲ ನೀಡಿದಲ್ಲಿ ಯಾವುದೇ ದಿನಾಂಕದಲ್ಲಿ ಒಟ್ಟು ಸಾಲದ ಹೊರಬಾಕಿ ರೂ.10.00 ಲಕ್ಷಗಳಿಗೆ ಮಾತ್ರ ಬಡ್ಡಿ ಸಹಾಯಧನ ಲಭ್ಯವಾಗುತ್ತದೆ. ರಾಜ್ಯ ಮತ್ತು ಕೇಂದ್ರ ಸರ್ಕಾರದ ಬಂಡವಾಳ ಸಹಾಯಧನ (Capital Subsidy) ಲಭ್ಯವಿದ್ದರೂ ಸಹ ಬಡ್ಡಿ ಸಹಾಯಧನ ದೊರೆಯಲಿದೆ.

3. ನಬಾರ್ಡ್ ಗುರುತಿಸಿದ ಕೃಷಿ / ಕೃಷಿ ಸಂಬಂಧಿತ ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳ ಪೈಕಿ ಲಘು ನೀರಾವರಿ, ಭೂ ಅಭಿವೃದ್ಧಿ, ಕೃಷಿ ಯಾಂತ್ರೀಕರಣ, ಪ್ಲಾಂಟೇಷನ್ ಹಾಗೂ ತೋಟಗಾರಿಕೆ ಅಭಿವೃದ್ಧಿ, ಸಾವಯವ ಕೃಷಿ, ಪಶುಸಂಗೋಪನೆ ಹಾಗೂ ಹೈನುಗಾರಿಕೆ, ಮೀನು ಕೃಷಿ, ರೇಷ್ಮೆ ಕೃಷಿ, ಜೇನು ಸಾಕಾಣಿಕೆ ಉದ್ದೇಶಗಳಿಗೆ ರೈತರಿಗೆ ನೀಡಲಾಗುವ ಸಾಲಗಳಿಗೆ ಮಾತ್ರ ಅನ್ವಯವಾಗುತ್ತದೆ. ಈ ಯೋಜನೆಯು ಕೊಯ್ಲು (Harvest) ವರೆಗಿನ ಮತ್ತು ಕೊಯ್ಲು ನಂತರದ ಕೃಷಿ ಚಟುವಟಿಕೆಗಳಿಗೆ ಅಂದರೆ ಮಾರುಕಟ್ಟೆಗೆ ಕೃಷಿ ಉತ್ಪನ್ನ ಸಿದ್ಧವಾಗುವ ಹಂತದ ವರೆಗೆ (threshing, winnowing, cleaning, grading, drying)) ಅವಶ್ಯವಿರುವ ಕೃಷಿ ಯಂತ್ರೋಪಕರಣ/ಘಟಕಗಳನ್ನು ಹೊಂದಲು ನೀಡುವ ಸಾಲಗಳಿಗೂ ಸಹ ಅನ್ವಯವಾಗುತ್ತದೆ. ದ್ವಿಚಕ್ರ ವಾಹನ, ಜೀಪು, ಪಿಕಪ್ ವ್ಯಾನ್ ಹಾಗೂ ಇನ್ನು ಮುಂತಾದ ಯಾವುದೇ ಕೃಷಿ ಸಾಗಾಣಿಕೆಗೆ ಬಳಸುವ ವಾಹನ ಸಾಲಗಳಿಗೆ, ತೋಟದ ಮನೆ, ಗ್ರಾಮೀಣ ಗೋದಾಮುಗಳಿಗೆ, ದ್ವಿತೀಯ ಸಂಸ್ಕರಣೆ, ಕೃಷಿ ಉತ್ಪನ್ನಗಳ ಮೌಲ್ಯ ವರ್ಧನೆ/ಆಹಾರ ಸಂಸ್ಕರಣೆ, ಕೃಷಿ ಕ್ಲಿನಿಕ್‌ಗೆ ನೀಡುವ ಸಾಲಗಳಿಗೆ ಈ ಯೋಜನೆ ಅನ್ವಯವಾಗುವುದಿಲ್ಲ ಹಾಗೂ ಇಂತಹ ಸಾಲಗಳಿಗೆ ಬ್ಯಾಂಕು ನಿಗದಿಪಡಿಸಿದ ಸಾಮಾನ್ಯ ಬಡ್ಡಿ ದರದಲ್ಲಿ ಸಾಲ ವಿತರಿಸಬಹುದಾಗಿದೆ. ರೈತರು ಸಾಲದಿಂದ ನಿರ್ಮಿಸುವ ಘಟಕ/ಯಂತ್ರೋಪಕರಣಗಳು ಕನಿಷ್ಠ ಶೇ.25 ರಷ್ಟು ಸ್ವಂತಕ್ಕೆ ಉಪಯೋಗಿಸಿಕೊಳ್ಳುವ ಸಾಮರ್ಥ್ಯವನ್ನು ಹೊಂದಿರತಕ್ಕದ್ದು.

4. ಬಡ್ಡಿ ಸಹಾಯಧನವು ಒಂದು ಸಹಕಾರ ಸಂಘದಲ್ಲಿ ಪಡೆದ ಸಾಲಕ್ಕೆ ಮಾತ್ರ ಅನ್ವಯವಾಗುತ್ತದೆ. ರೈತನ ವಾಸ ಸ್ಥಳ ಮತ್ತು ಭೂಮಿ ಒಂದೇ ಸಂಘದ ವ್ಯಾಪ್ತಿಯಲ್ಲಿದ್ದರೆ ಇತರೇ ಯಾವುದೇ ಸಂಘದ ಬೇ ಬಾಕಿ ಪತ್ರ ಪಡೆಯಬೇಕಿಲ್ಲ. ರೈತನ ಭೂಮಿ ಮತ್ತು ವಾಸ ಸ್ಥಳ ಬೇರೆ ಬೇರೆ ಸಂಘದ ವ್ಯಾಪ್ತಿಯಲ್ಲಿದ್ದರೆ ಅಥವಾ ಎರಡು ಸಹಕಾರ ಸಂಘಗಳ ವ್ಯಾಪ್ತಿಯಲ್ಲಿ ಬೇರೆ ಬೇರೆ ಭೂಮಿ ಹೊಂದಿದ್ದರೆ, ರೈತನು ಸಾಲಕ್ಕಾಗಿ ಅರ್ಜಿ ಸಲ್ಲಿಸಿದ ಸಂಘವು ರೈತನು ಹೊಂದಿರುವ ಒಟ್ಟಾರೆ ಭೂಮಿಯ ವಿವರವನ್ನು ಪಡೆದು, ವಾಸ ಸ್ಥಳದ ಸಂಘ ಮತ್ತು ರೈತನ ಇತರೆ ಭೂಮಿಯ ಸಂಘದಿಂದ ಬೇ ಬಾಕಿ ಪತ್ರ ಪಡೆದು ಅದೇ ಸಂಘದಲ್ಲಿ ಇತರೇ ಸಂಘದ ವ್ಯಾಪ್ತಿಯ ಭೂಮಿಗೂ ಸಹ ಸಾಲ ವಿತರಿಸಬಹುದಾಗಿದೆ ಮತ್ತು ಬೇ ಬಾಕಿ ಪತ್ರ ಪಡೆಯುವುದು ಸಂಘದ ಜವಾಬ್ದಾರಿಯಾಗಿರುತ್ತದೆ.

ಆಧಾರ್ ಕಾರ್ಡ್‌ನಲ್ಲಿರುವ ವಿಳಾಸವನ್ನು ವಾಸ ಸ್ಥಳ ಎಂದು ಪರಿಗಣಿಸತಕ್ಕದ್ದು. ರೈತನು ನೆರೆ ರಾಜ್ಯದಲ್ಲಿ ವಾಸವಿದ್ದು, ಕರ್ನಾಟಕ ರಾಜ್ಯದಲ್ಲಿ ಭೂಮಿ ಇದ್ದರೆ, ಅಂತಹ ರೈತನಿಗೆ ಈ ಯೋಜನೆ ಅನ್ವಯವಾಗುವುದಿಲ್ಲ.

5. ಮೂರು ಹಂತದ (ಡಿಸಿಸಿ ಬ್ಯಾಂಕ್ ಮತ್ತು ಪ್ಯಾಕ್ಸ್) ಸಹಕಾರ ಸಂಘಗಳು/ಬ್ಯಾಂಕುಗಳು ತಮ್ಮ ಅಧೀನದಲ್ಲಿ ಬರುವ ಸಹಕಾರ ಸಂಘಗಳು ಮತ್ತು ರೈತರಿಗೆ ಆಕರಣೆ ಮಾಡಬೇಕಾದ, ವಸೂಲು ಮಾಡಬೇಕಾದ ಬಡ್ಡಿದರ ಮತ್ತು ಸರ್ಕಾರದಿಂದ ನೀಡುವ ಬಡ್ಡಿ ಸಹಾಯಧನ ದರವನ್ನು ಈ ಕೆಳಗಿನಂತೆ ನಿಗದಿಪಡಿಸಲಾಗಿದೆ.

a. ಅಪೆಕ್ಸ್ ಬ್ಯಾಂಕ್ ನಬಾರ್ಡ್‌ನಿಂದ ರಿಯಾಯತಿ ಬಡ್ಡಿ ದರದಲ್ಲಿ ಪಡೆದ ಸಾಲಕ್ಕೆ ನಬಾರ್ಡ್ ನಿಗದಿಪಡಿಸಿದ ಬಡ್ಡಿ ದರಕ್ಕೆ ಅಪೆಕ್ಸ್ ಬ್ಯಾಂಕ್ ಮಾರ್ಜಿನ್ ದರ ಶೇ.0.30 ನ್ನು ಸೇರಿಸಿ ಬಡ್ಡಿ ಆಕರಣೆ ಮಾಡಿ ಡಿಸಿಸಿ

ಬ್ಯಾಂಕುಗಳಿಗೆ ಸಾಲ ವಿತರಿಸಬೇಕು. ಅಪೆಕ್ಸ್ ಬ್ಯಾಂಕ್ ತನ್ನ ಸ್ವಂತ ಬಂಡವಾಳದಲ್ಲಿ ವಿತರಿಸಿದ ಸಾಲಗಳಿಗೆ ತನ್ನ ಯುಕ್ತ ಬಡ್ಡಿದರದಲ್ಲಿ ಸಾಲ ವಿತರಿಸುವುದು.

b. ಡಿಸಿಸಿ ಬ್ಯಾಂಕುಗಳು/ವಾಣಿಜ್ಯ ಬ್ಯಾಂಕುಗಳು ಪ್ಯಾಕ್ಸ್ ಗಳಿಗೆ ಶೇ.5.80 ರ ಬಡ್ಡಿದರವನ್ನು ಬಡ್ಡಿ ಆಕರಣೆ ಮಾಡಿ ಸಾಲ ವಿತರಿಸತಕ್ಕದ್ದು. ಈ ಬ್ಯಾಂಕುಗಳು ಸರ್ಕಾರ / ರೈತರು ಪಾವತಿಸುವ ಬಡ್ಡಿಯಲ್ಲಿ ಮಾತ್ರ ಪ್ರಾಥಮಿಕ ಸಂಘಗಳ ಮಾರ್ಜಿನ್ ಶೇ.2ನ್ನು ನೀಡಿ, ಉಳಿದ ಬಡ್ಡಿಯನ್ನು ಪಡೆಯತಕ್ಕದ್ದು.

c. ಪ್ಯಾಕ್ಸ್‌ಗಳು ರೈತರಿಗೆ (ಸ್ವಂತ ಬಂಡವಾಳ ಅಥವಾ ಡಿಸಿಸಿ ಬ್ಯಾಂಕಿನ ಬಂಡವಾಳದಿಂದ) ಶೇ.7.8 ರ ಬಡ್ಡಿ ಆಕರಿಸಿ ಸಾಲ ವಿತರಿಸತಕ್ಕದ್ದು, ರೈತರು ನಿಗದಿತ ಅವಧಿಯಲ್ಲಿ ಸಾಲ/ಕಂತನ್ನು ಮರುಪಾವತಿಸಿದಲ್ಲಿ ಶೇ.3ರ ಬಡ್ಡಿಯನ್ನು ಮಾತ್ರ ಪಡೆದು, ರಾಜ್ಯ ಸರ್ಕಾರದಿಂದ ಶೇ.4.8ರ ಬಡ್ಡಿ ಸಹಾಯಧನವನ್ನು ಕ್ಲೇಮ್ ಮಾಡತಕ್ಕದ್ದು. ಇದಕ್ಕಾಗಿ ರೈತರ ಬಡ್ಡಿ ಖಾತೆಗೆ ಮೊದಲು ಜಮಾ ಮಾಡಿ ರಾಜ್ಯ ಸರ್ಕಾರದಿಂದ ಕ್ಲೇಮ್ ಮಾಡತಕ್ಕದ್ದು. ಇದರಿಂದ ರೈತರಿಗೆ ಶೇ.3ರ ಬಡ್ಡಿದರದಲ್ಲಿ ಸಾಲ ದೊರೆಯುತ್ತದೆ. ಡಿಸಿಸಿ ಬ್ಯಾಂಕುಗಳು ನೇರವಾಗಿ ಶಾಖೆಗಳ ಮೂಲಕ ಸಾಲ ವಿತರಿಸಿದಲ್ಲಿ ರೈತರಿಗೆ ಶೇ.6.7 ರ ಬಡ್ಡಿ ದರದಲ್ಲಿ ಸಾಲ ವಿತರಿಸತಕ್ಕದ್ದು, ಮತ್ತು ರಾಜ್ಯ ಸರ್ಕಾರದಿಂದ ಶೇ.3.7ರ ಬಡ್ಡಿ ಸಹಾಯಧನವನ್ನು ಕ್ಲೇಮು ಮಾಡತಕ್ಕದ್ದು. ಸುಸ್ತಿಯಾದ ಸಾಲಗಳಿಗೆ ಬ್ಯಾಂಕುಗಳು/ಸಂಘಗಳು ಸಾಮಾನ್ಯ ಬಡ್ಡಿ ದರ ನಿಗದಿಪಡಿಸಬಹುದು.

d. ಬಡ್ಡಿ ಸಹಾಯಧನದ ದರವು 2020-21ನೇ ಸಾಲಿನ ನಬಾರ್ಡ್ ಪುನರ್ಧನದ ಬಡ್ಡಿ ಆಧರಿಸಿ ನಿಗಧಿಪಡಿಸಿದ್ದು, 2022-23 ರಲ್ಲಿ ನಬಾರ್ಡ್ ಬಡ್ಡಿ ದರಗಳು ಬದಲಾದಲ್ಲಿ ಅದಕ್ಕೆ ಅನುಗುಣವಾಗಿ ಸರ್ಕಾರದ ಬಡ್ಡಿ ಸಹಾಯಧನವನ್ನು ಪರಿಷ್ಕರಿಸಲಿದ್ದು, ಅದಕ್ಕೆ ಸಹಕಾರ ಸಂಸ್ಥೆಗಳು/ ಬ್ಯಾಂಕುಗಳು ಬದ್ಧರಾಗಿರತಕ್ಕದ್ದು. ನಬಾರ್ಡ್‌ನಿಂದ ಆದ್ಯತಾ ವಲಯಕ್ಕೆ ಕಡಿಮೆ ಬಡ್ಡಿ ದರದಲ್ಲಿ ಮಂಜೂರು ಮಾಡುವ ಸಂಪೂರ್ಣ ಸಾಲದ ಮಿತಿಯನ್ನು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳು ಉಪಯೋಗ ಮಾಡಿಕೊಳ್ಳತಕ್ಕದ್ದು. ಇದರ ಆಧಾರದ ಮೇಲೆ ಬಡ್ಡಿ ಸಹಾಯಧನವನ್ನು ಪರಿಷ್ಕರಿಸಲಾಗುವುದು.

6. ಕಸ್ಕಾರ್ಡ್ ಬ್ಯಾಂಕ್ ಮತ್ತು ಪಿಕಾರ್ಡ್ ಬ್ಯಾಂಕುಗಳು ಮೇಲಿನ ರೀತಿಯಲ್ಲಿ ಬಡ್ಡಿ ದರಗಳನ್ನು ನಿಗದಿಪಡಿಸಲು ನಿಬಂಧಕರ ಮೂಲಕ ಸರ್ಕಾರಕ್ಕೆ ಪ್ರಸ್ತಾವೆ ಸಲ್ಲಿಸಿ ಅನುಮೋದನೆ ಪಡೆಯತಕ್ಕದ್ದು.

7. ಪ್ಯಾಕ್ಸ್ ಗಳು ಮತ್ತು ಪಿಕಾರ್ಡ್ ಬ್ಯಾಂಕುಗಳು ಸಾಲ ನೀಡುವ ಬ್ಯಾಂಕಿನ ಬಂಡವಾಳ ಅಥವಾ ಸ್ವಂತ ಬಂಡವಾಳದಲ್ಲಿ ರೈತರಿಗೆ ವಿತರಿಸುವ ಎಲ್ಲಾ ಹಂತದ ಸಾಲಗಳನ್ನು ಕಡ್ಡಾಯವಾಗಿ ಡಿಸಿಸಿ ಬ್ಯಾಂಕ್ ಅಥವಾ ಅಧ್ಯರ್ಪಿತಗೊಂಡ ವಾಣಿಜ್ಯ ಬ್ಯಾಂಕಿನಲ್ಲಿ ರೈತರು ಹೊಂದಿರುವ ಉಳಿತಾಯ ಖಾತೆಗಳ ಮೂಲಕವೇ ವಿತರಿಸತಕ್ಕದ್ದು. ಉಳಿತಾಯ ಖಾತೆಗಳಿಗೆ ರೈತನ ಆಧಾರ್ ಕಾರ್ಡ್ ಲಿಂಕ್ ಮಾಡುವುದು ಮತ್ತು ರೈತನಿಂದ ಈ ಯೋಜನೆಗೆ ಆಧಾರ್ ಕಾರ್ಡ್ ಬಳಸಲು ಆಧಾರ್ ದೃಢೀಕರಣ ಪತ್ರ ಪಡೆಯುವುದು ಕಡ್ಡಾಯವಾಗಿರುತ್ತದೆ.

8. ಈ ಯೋಜನೆಯಡಿ ಸರ್ಕಾರದ ಬಡ್ಡಿ ಸಹಾಯಧನವು ಸಹಕಾರ ಸಂಘ/ಬ್ಯಾಂಕ್ ನಿಗದಿಪಡಿಸಿದ ಗಡುವಿನ ದಿನಾಂಕದೊಳಗೆ ಕಂತು (ಅಸಲು ಮತ್ತು ಹೊರ ಬಾಕಿ ಮೊತ್ತಕ್ಕೆ ಗಡುವಿನ ದಿನಾಂಕದವರೆಗೆ ರೈತರ ಪಾಲಿನ ಬಡ್ಡಿ) ಮರುಪಾವತಿಸಿದ್ದಲ್ಲಿ ಮಾತ್ರ ದೊರೆಯುತ್ತದೆ. ರೈತರು ಗಡುವು ದಿನಾಂಕದಿಂದ 15 ದಿನದೊಳಗಾಗಿಯೂ ಸಹ ಕಂತನ್ನು ಮರುಪಾವತಿಸಲು ಅವಕಾಶ ಕಲ್ಪಿಸಲಾಗಿದೆ. ಆದರೆ ಗಡುವು ದಿನಾಂಕದಿಂದ ಕಂತು ಮರುಪಾವತಿಸುವ ದಿನಾಂಕದವರೆಗೆ ರೈತರೇ ಹೊರಬಾಕಿ ಮೊತ್ತಕ್ಕೆ ಪೂರ್ಣ ಬಡ್ಡಿಯನ್ನು ಪಾವತಿಸತಕ್ಕದ್ದು. ಸುಸ್ತಿಯಾದ ಸಾಲಗಳಿಗೆ ಬಡ್ಡಿ ಸಹಾಯಧನ ದೊರೆಯುವುದಿಲ್ಲ. ಹಾಗೂ ಇಂತಹ ಸುಸ್ತಿ ಕಂತುಗಳನ್ನು ಸಾಮಾನ್ಯ ಬಡ್ಡಿ ಮತ್ತು ಇತರೆ ವೆಚ್ಚಗಳೊಂದಿಗೆ ಮರುಪಾವತಿಸಿದ ಪಕ್ಷದಲ್ಲಿ ನಂತರದ ಚಾಲ್ತಿ ಕಂತುಗಳಿಗೆ ಶೇ.3 ರ ಬಡ್ಡಿ ರಿಯಾಯಿತಿಯ ಸೌಲಭ್ಯಗಳು ಮುಂದುವರೆಯುತ್ತವೆ.

9. ಈ ಯೋಜನೆಯ ಅವಧಿಯಲ್ಲಿ ಬಡ್ಡಿ ಸಹಾಯಧನವು ಪೂರ್ಣವಾಗಿ ಮರುಪಾವತಿಯಾಗುವ ಸಾಲ/ಕಂತುಗಳಿಗೆ ಮಾತ್ರ ದೊರೆಯುತ್ತದೆ. ಸಾಲದ ಪೂರ್ಣ ಕಂತುಗಳನ್ನು ನಿಗದಿತ ಗಡುವು ದಿನಾಂಕಗಳಿಗಿಂತ ಮುಂಚಿತವಾಗಿ ಮರುಪಾವತಿಸಿದ್ದಲ್ಲಿ ಸಾಲ ಮರುಪಾವತಿಯ ದಿನಾಂಕದವರೆಗೆ ಬಡ್ಡಿ ಸಹಾಯಧನವು ಅನ್ವಯಿಸುತ್ತದೆ. ಯೋಜನೆಯಲ್ಲಿ ರೈತರು ಜೆಸ್ಟೇಷನ್ ಅವಧಿ (Gestation Period) ಯಲ್ಲಿ ಪ್ರತಿ ಆರು ತಿಂಗಳಿಗೆ ಮೀರದ ಅವಧಿಯಲ್ಲಿ ಸರ್ಕಾರ ನಿಗದಿಪಡಿಸಿದ ಬಡ್ಡಿ ದರದಲ್ಲಿ ಗಡುವಿನ

ದಿನಾಂಕದವರೆಗಿನ ಬಡಿಯನ್ನು ಪಾವತಿಸಿದ್ದಲ್ಲಿ ಬಡ್ಡಿ ಸಹಾಯಧನವು ಲಭ್ಯವಾಗುತ್ತದೆ. ಈ ರೀತಿ ಬಡ್ಡಿ ಪಾವತಿಸುವಾಗ ಅಸಲಿನ ಮೊತ್ತಕ್ಕೆ ಖರ್ಚು ಹಾಕತಕ್ಕದ್ದಲ್ಲ. ಕಂತುಗಳನ್ನು ಪಾವತಿಸುವಾಗ ರೈತನು ಗಡುವು ದಿನಾಂಕದಿಂದ ಮುಂಚಿತವಾಗಿ ಕಂತು ಮರುಪಾವತಿಸಿದ್ದಲ್ಲಿ ಗಡುವು ದಿನಾಂಕದವರೆಗೆ ಬಡ್ಡಿ ಪಡೆದು ಸರ್ಕಾರದ ಬಡ್ಡಿ ಸಹಾಯಧನವನ್ನು ಗಡುವು ದಿನಾಂಕದವರೆಗೆ ಕ್ಲೇಮು ಮಾಡತಕ್ಕದ್ದು.

10. ಪತ್ತಿನ ಸಹಕಾರ ಸಂಘಗಳು/ಬ್ಯಾಂಕುಗಳು ತಮಗೆ ದೊರೆಯಬೇಕಾದ ಬಡ್ಡಿ ಸಹಾಯಧನದ ಮತ್ತು ರೈತರಿಗೆ ದೊರೆಯಬೇಕಾದ ಬಡ್ಡಿ ಪ್ರೋತ್ಸಾಹಧನದ ಬಿಲ್ಲುಗಳನ್ನು ಪ್ರತಿ ತ್ರೈಮಾಸಿಕವಾಗಿ ಸಾಲ ವಸೂಲಾತಿ ಆಧಾರವಾಗಿ ತಯಾರಿಸತಕ್ಕದ್ದು.

11. 2022-23 ನೇ ಸಾಲಿನಲ್ಲಿ ವಸೂಲಿಗೆ ಬರುವ ಸಾಲದ ಮೇಲಿನ ಬಿಲ್ಲುಗಳನ್ನು ಡಿಸಿಸಿ ಬ್ಯಾಂಕಿನ ವ್ಯವಸ್ಥಾಪಕರು ಮತ್ತು ತಾಲ್ಲೂಕು ಅಭಿವೃದ್ಧಿ ಅಧಿಕಾರಿ ಶೇ.100 ರಷ್ಟು ಬಿಲ್ಲುಗಳನ್ನು ದೃಢೀಕರಿಸಿ, ನಂತರ ಡಿಸಿಸಿ ಬ್ಯಾಂಕ್‌ಗಳು ಕ್ರೋಢೀಕರಿಸಿ, ಜಿಲ್ಲಾ ಉಪನಿಬಂಧಕರು ಮತ್ತು ಡಿಸಿಸಿ ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಶೇ.5 ರಷ್ಟು ಸಂಘಗಳ ಶೇ.10 ಖಾತೆಗಳನ್ನು ಪರಿಶೀಲಿಸಿ, ದೃಢೀಕರಿಸಿದ ನಂತರ ಅಪೆಕ್ಸ್ ಬ್ಯಾಂಕ್ ಮೂಲಕ ನಿಬಂಧಕರಿಗೆ ಸಲ್ಲಿಸತಕ್ಕದ್ದು.

12. ಸಹಕಾರ ಸಂಘಗಳ ನಿಬಂಧಕರು ಸದರಿ ಬಿಲ್ಲುಗಳನ್ನು ಆಧರಿಸಿ ಸರ್ಕಾರದಿಂದ ಅನುದಾನ ಬಿಡುಗಡೆ ಪಡೆದು ಸಂಬಂಧಿಸಿದ ಫಲಾನುಭವಿಗಳಿಗೆ ಅನುದಾನ ಬಿಡುಗಡೆ ಮಾಡತಕ್ಕದ್ದು ಹಾಗೂ ಹಣದ ಉಪಯೋಗದ ಬಗ್ಗೆ ಕಾಲಕಾಲಕ್ಕೆ ಬಳಕೆ ಪ್ರಮಾಣ ಪತ್ರಗಳನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

13. ಪ್ರಸ್ತುತ ಆರ್ಥಿಕ ವರ್ಷ 01-04-2022 ರಿಂದ 31-03-2023 ರವರೆಗೆ ಡಿಸಿಸಿ ಬ್ಯಾಂಕುಗಳಿಗೆ 31929 ರೈತರಿಗೆ ರೂ.1131.00 ಕೋಟಿ ಮತ್ತು ಕಸ್ಕಾರ್ಡ್ ಬ್ಯಾಂಕಿಗೆ 32084 ರೈತರಿಗೆ ರೂ.532.00 ಕೋಟಿ ಒಟ್ಟು 64,013 ರೈತರಿಗೆ ರೂ.1663.00 ಕೋಟಿಗಳ ಸಾಲ ವಿತರಿಸುವ ಗುರಿಯನ್ನು ನಿಗದಿಪಡಿಸಿದ್ದು ಅದರಂತೆ ಸಾಲ ವಿತರಿಸಲು ಕ್ರಮ ಜರುಗಿಸತಕ್ಕದ್ದು. ಹೀಗೆ ನಿಗದಿಪಡಿಸುವಾಗ ಜಿಲ್ಲೆಯಲ್ಲಿನ ಹೊಸ ಸದಸ್ಯರಿಗೆ ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಸದಸ್ಯರಿಗೆ ಜಿಲ್ಲೆಯಲ್ಲಿ ಈ ವರ್ಗದ ರೈತರ ಪ್ರಮಾಣಕ್ಕೆ ಅನುಗುಣವಾಗಿ (ಕನಿಷ್ಠ ಪ್ರಮಾಣಕ್ಕಿಂತ ಹೆಚ್ಚಿನ ಪ್ರಮಾಣ) ಪ್ರತ್ಯೇಕವಾಗಿ ಗುರಿ ನಿಗದಿಪಡಿಸತಕ್ಕದ್ದು. ಒಟ್ಟಾರೆ ವಿತರಿಸಿದ ಸಾಲದ ಪೈಕಿ ಶೇಕಡಾ 24.10 ರಷ್ಟು ಸಾಲವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸದಸ್ಯರಿಗೆ ಸಾಲ ನೀಡುವುದು ಕಡ್ಡಾಯವಾಗಿರುತ್ತದೆ. ಯಾವುದೇ ವಿಧಾನ ಸಭಾ ಕ್ಷೇತ್ರಗಳಿಗೆ ತಾರತಮ್ಯ ಮಾಡದೇ ಸೂಕ್ತ ಸಾಲ ವಿತರಣಾ ನೀತಿಯನ್ನು ರೂಪಿಸಿ ಸಾಲ ವಿತರಿಸತಕ್ಕದ್ದು. ಕಸ್ಕಾರ್ಡ್ ಬ್ಯಾಂಕ್ ಪಿಕಾರ್ಡ್ ಬ್ಯಾಂಕುಗಳಿಗೂ ಸಹ ಇದೇ ರೀತಿಯಲ್ಲಿ ನಬಾರ್ಡ್ ಪುನರ್ಧನದ ಮಿತಿ ಆಧಾರದಲ್ಲಿ ಗುರಿಯನ್ನು ನಿಗದಿಪಡಿಸತಕ್ಕದ್ದು.

14. ಸಾಲದ ಮಿತಿ, ಮರುಪಾವತಿ ಅವಧಿ ಮತ್ತು ಕಂತುಗಳನ್ನು ಯೋಜನಾ ವೆಚ್ಚ ಮತ್ತು ಆದಾಯವನ್ನು ನಬಾರ್ಡ್ ನಿಗದಿಪಡಿಸಿದ ಮಾನದಂಡಗಳನ್ವಯ ಪರಿಶೀಲಿಸಿ ಸೂಕ್ತವಾಗಿ ನಿಗದಿಪಡಿಸತಕ್ಕದ್ದು. ಸಾಲ ವಿತರಿಸುವಾಗ ನಿಗದಿಪಡಿಸಿದ ಕಂತುಗಳನ್ನು ನಿಬಂಧಕರ/ ಸರ್ಕಾರದ ಅನುಮತಿ ಇಲ್ಲದೇ ಮುಂದೂಡಲು ಅವಕಾಶ ಇರುವುದಿಲ್ಲ. ಪ್ರಕೃತಿ ವಿಕೋಪ ಸಂದರ್ಭದಲ್ಲಿ ಕಂತು ಮುಂದೂಡಲು ಸಹಕಾರ ಸಂಘಗಳು ಪ್ರಸ್ತಾವನೆ ಸಲ್ಲಿಸಬಹುದು. ಒಂದು ವೇಳೆ ಸರ್ಕಾರದ ಬಡ್ಡಿ ಸಹಾಯಧನ ಮುಂದಿನ ವರ್ಷಗಳಲ್ಲಿ ಯಾವುದೇ ಕಾರಣಕ್ಕೆ ಸ್ಥಗಿತಗೊಂಡರೆ ಸಂಬಂಧಿಸಿದ ಬಡ್ಡಿ ಪಾವತಿಸಲು ಬದ್ಧರಾಗಿರತಕ್ಕದ್ದು. ಪ್ರಾಥಮಿಕ ಸಹಕಾರ ಸಂಘಗಳು ಮತ್ತು ಸಾಲ ಒದಗಿಸುವ ಬ್ಯಾಂಕುಗಳು ಸಾಲಕ್ಕಾಗಿ ರೈತರಿಂದ ಪಡೆಯುವ ಯೋಜನಾ ವರದಿ, ಭದ್ರತೆಯ ದಾಖಲೆಗಳು ಮತ್ತು ರೈತರ ವೈಯಕ್ತಿಕ ದಾಖಲೆಗಳನ್ನು ಸೂಕ್ತವಾಗಿ ನಿರ್ವಹಣೆ ಮಾಡಿ ಸಾಲ ತೀರುವಳಿ ಆದ ನಂತರ ರೈತರಿಗೆ ತಡಮಾಡದೇ ಹಿಂದಿರುಗಿಸತಕ್ಕದ್ದು ಮತ್ತು ದೃಢೀಕರಿಸುವ ಅಧಿಕಾರಿಗಳಿಗೆ ಒದಗಿಸತಕ್ಕದ್ದು.

15. ಸಹಕಾರ ಸಂಘಗಳ ನಿಬಂಧಕರು ಈ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಅಗತ್ಯವಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

16. ಈ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕಾಲಕಾಲಕ್ಕೆ ಸರ್ಕಾರ ಮತ್ತು ಸಹಕಾರ ಸಂಘಗಳ ನಿಬಂಧಕರು ನೀಡಿದ ಸೂಚನೆಗಳನ್ನು ಸಹಕಾರ ಸಂಸ್ಥೆಗಳು ಪಾಲಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: 49 ವೆಚ್ಚ 2/2022, ದಿನಾಂಕ: 07-04-2022 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಂ.ವೆಂಕಟಸ್ವಾಮಿ)
**ವಿಶೇಷ ಕರ್ತವ್ಯಾಧಿಕಾರಿ ಹಾಗೂ**
**ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,**
**ಸಹಕಾರ ಇಲಾಖೆ.**

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು, ಇವರಿಗೆ ಕರ್ನಾಟಕ ರಾಜ್ಯಪತ್ರದಲ್ಲಿ ಕೂಡಲೇ ಪ್ರಕಟಿಸಿ, ಅದರ 100 ಪ್ರತಿಗಳನ್ನು ಒದಗಿಸಲು ಕೋರಿದೆ.

**ಪ್ರತಿಗಳು:**

1. ಸನ್ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಮಹಾಲೇಖಪಾಲರು, ಕರ್ನಾಟಕ ರಾಜ್ಯ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನಾ ಇಲಾಖೆ, ಬಹುಮಹಡಿ ಕಟ್ಟಡ.
6. ಸಹಕಾರ ಸಂಘಗಳ ನಿಬಂಧಕರು, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-52.
7. ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕರು, ಶಂಕರಮಠ ರಸ್ತೆ, ಬಸವನಗುಡಿ, ಬೆಂ-04.
8. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಉತ್ತುಂಗ, ನಂ.1, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-18.
9. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ., ಚಾಮರಾಜಪೇಟೆ, ಬೆಂಗಳೂರು-18.
10. ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರು.
11. ಎಲ್ಲಾ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರು.
12. ಎಲ್ಲಾ ಜಿಲ್ಲಾ ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಉಪ ನಿರ್ದೇಶಕರು.

    } **ಸಹಕಾರ ಸಂಘಗಳ ನಿಬಂಧಕರ ಮೂಲಕ**

13. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ., ಕೆಂಗಲ್ ಹನುಮಂತಯ್ಯ ರಸ್ತೆ, ಬೆಂಗಳೂರು.
14. ಮಾನ್ಯ ಸಹಕಾರ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
15. ಆಂತರಿಕ ಆರ್ಥಿಕ ಸಲಹೆಗಾರರು, ಸಹಕಾರ ಇಲಾಖೆ, ಬಹುಮಹಡಿ ಕಟ್ಟಡ.
16. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಹಕಾರ ಇಲಾಖೆ.
17. ಸರ್ಕಾರದ ಅಧೀನ ಕಾರ್ಯದರ್ಶಿ-3, ಸಹಕಾರ ಇಲಾಖೆ.
18. ರಾಜ್ಯ ಹುಜೂರು ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
19. ರಾಜ್ಯ ಖಜಾನಾಧಿಕಾರಿ, ಜೆ.ಸಿ ರಸ್ತೆ, ಬೆಂಗಳೂರು.
20. ಶಾಖಾ ರಕ್ಷಾ ಕಡತ:ಹೆಚ್ಚುವರಿ ಪ್ರತಿ.

***

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಒ 150 ಸಿಎಲ್ಎಸ್ 2022

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ: 08-04-2022

**ಇಂದ:**
**ಸರ್ಕಾರದ ಪ್ರಧಾನ ಕಾರ್ಯದರ್ಶಿ,**
ಸಹಕಾರ ಇಲಾಖೆ,
ಬೆಂಗಳೂರು-01.

ಇವರಿಗೆ:

1. ಸಹಕಾರ ಸಂಘಗಳ ನಿಬಂಧಕರು, ನಂ.01, ಆಲಿ ಆಸ್ಕರ್ ರಸ್ತೆ, ಬೆಂಗಳೂರು-52
2. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ ನಿ., ಚಾಮರಾಜಪೇಟೆ, ಬೆಂಗಳೂರು-18.
3. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ., ಚಾಮರಾಜಪೇಟೆ, ಬೆಂಗಳೂರು-18.
4. ರಾಜ್ಯದ ಎಲ್ಲಾ ಡಿಸಿಸಿ ಬ್ಯಾಂಕ್‌ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ (ಸಹಕಾರ ಸಂಘಗಳ ನಿಬಂಧಕರ ಮೂಲಕ)

**ಮಾನ್ಯರೇ,**

ವಿಷಯ: 2022-23ನೇ ಸಾಲಿಗೆ ರಾಜ್ಯದ ರೈತರಿಗೆ ಪತ್ತಿನ ಸಹಕಾರಿ ಸಂಸ್ಥೆಗಳ ಶೂನ್ಯ ಬಡ್ಡಿದರ ಅನ್ವಯವಾಗುವಂತೆ ರೂ.3.00 ಲಕ್ಷಗಳವರೆಗೆ ಅಲ್ಪಾವಧಿ ಕೃಷಿ ಸಾಲ ಮತ್ತು ರೂ.2.00 ಲಕ್ಷಗಳವರೆಗೆ ಪಶುಸಂಗೋಪನೆ ಮತ್ತು ಮೀನುಗಾರಿಕೆ ದುಡಿಯುವ ಬಂಡವಾಳ ಸಾಲ ವಿತರಿಸುವ ಬಗ್ಗೆ ಮತ್ತು ರೂ.10.00 ಲಕ್ಷಗಳವರೆಗೆ ಶೇ.3 ರ ಬಡ್ಡಿ ದರ ಅನ್ವಯವಾಗುವಂತೆ ಮಧ್ಯಮಾವಧಿ / ದೀರ್ಘಾವಧಿ ಕೃಷಿ ಸಾಲ ವಿತರಿಸುವ ಬಗ್ಗೆ ಗುರಿ ನಿಗಧಿಪಡಿಸುವ ಕುರಿತು.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ: ಸಿಒ 150 ಸಿಎಲ್ಎಸ್ 2022, ದಿ:08.04.2022
2. ಸರ್ಕಾರದ ಆದೇಶ ಸಂಖ್ಯೆ: ಸಿಒ 153 ಸಿಎಲ್ಎಸ್ 2022, ದಿ:08.04.2022

************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2022-23 ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ ಸಂಖ್ಯೆ 68 ರಲ್ಲಿ ಮಾನ್ಯ ಮುಖ್ಯಮಂತ್ರಿಯವರು **"ಸಹಕಾರ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸುತ್ತಿರುವ ಬಡ್ಡಿ ಸಹಾಯಧನ ಯೋಜನೆಯಡಿ 2021-22ನೇ ಸಾಲಿನಲ್ಲಿ ಇಲ್ಲಿಯತನಕ ಒಟ್ಟು 22.50 ಲಕ್ಷ ರೈತರಿಗೆ 16,355 ಕೋಟಿ ರೂ.ಗಳ ಕೃಷಿ ಸಾಲವನ್ನು ವಿತರಿಸಲಾಗಿದ್ದು, ಇದರಲ್ಲಿ 2.5 ಲಕ್ಷ ಹೊಸ ರೈತರಿಗೆ ಸಾಲ ವಿತರಿಸಲಾಗಿದೆ. 2022-23ನೇ ಸಾಲಿನಲ್ಲಿ ಒಟ್ಟು 33 ಲಕ್ಷ ರೈತರಿಗೆ 24,000 ಕೋಟಿ ರೂ.ಗಳ ಕೃಷಿ ಸಾಲವನ್ನು ವಿತರಿಸುವ ಗುರಿ ಹೊಂದಿದ್ದು, ಇದರಲ್ಲಿ 3 ಲಕ್ಷ ಹೊಸ ರೈತರಿಗೆ ಸಾಲವನ್ನು ನೀಡಲಾಗುವುದು"** ಎಂದು ಘೋಷಿಸಿರುತ್ತಾರೆ.

ಉಲ್ಲೇಖ (1) ಮತ್ತು (2) ಸರ್ಕಾರದ ಆದೇಶಗಳಲ್ಲಿ 2022-23ನೇ ಸಾಲಿಗೆ ರಾಜ್ಯದ ರೈತರಿಗೆ ಪತ್ತಿನ ಸಹಕಾರಿ ಸಂಸ್ಥೆಗಳ ಶೂನ್ಯ ಬಡ್ಡಿದರ ಅನ್ವಯವಾಗುವಂತೆ ರೂ.3.00 ಲಕ್ಷಗಳವರೆಗೆ ಅಲ್ಪಾವಧಿ ಕೃಷಿ ಸಾಲ ಮತ್ತು ರೂ.2.00 ಲಕ್ಷಗಳವರೆಗೆ ಪಶುಸಂಗೋಪನ ಮತ್ತು ಮೀನುಗಾರಿಕೆ ದುಡಿಯುವ ಬಂಡವಾಳ ಸಾಲ ವಿತರಿಸುವ ಬಗ್ಗೆ ಮತ್ತು ರೂ.10.00 ಲಕ್ಷಗಳವರೆಗೆ ಶೇ.3 ರ ಬಡ್ಡಿ ದರ ಅನ್ವಯವಾಗುವಂತ ಮಧ್ಯಮಾವಧಿ / ದೀರ್ಘಾವಧಿ ಕೃಷಿ ಸಾಲ ವಿತರಿಸಲು ಷರತ್ತುಗಳೊಂದಿಗೆ ಆದೇಶ ಹೊರಡಿಸಿಲಾಗಿದ. ಸದರಿ ಆದೇಶಗಳಂತೆ ಪ್ರಸ್ತುತ ಆರ್ಥಿಕ ವರ್ಷದಲ್ಲಿ ಆಯಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳು ಹಾಗೂ ಕಸ್ಕಾರ್ಡ್ ಬ್ಯಾಂಕ್ ಸಾಲ ವಿತರಿಸಲು ಗುರಿ ನಿಗಧಿಪಡಿಸಿದ್ದು, **(ಪ್ರತಿ ಲಗತ್ತಿಸಿದೆ)** ಸದರಿ ಗುರಿಯಂತೆ ಸಾಲ ವಿತರಿಸಿ ಯೋಜನೆ ಯಶಸ್ವಿ ಅನುಷ್ಠಾನಗೊಳಿಸುವಂತೆ ತಮ್ಮನ್ನು ಕೋರಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಎಂ. ವೆಂಕಟಸ್ವಾಮಿ)
**ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ**
**ಸರ್ಕಾರದ ಜಂಟಿ ಕಾರ್ಯದರ್ಶಿ,**
**ಸಹಕಾರ ಇಲಾಖೆ.**

18

2022-23 ನೇ ಸಾಲಿಗೆ ಸಹಕಾರ ಸಂಸ್ಥೆಗಳು ಕೃಷಿ ಸಾಲ ವಿತರಿಸಲು ನಿಗದಿಪಡಿಸಿದ ಗುರಿ

(ರೂ.ಕೋಟಿಗಳಲ್ಲಿ)

| ಕ್ರ ಸಂ | ಡಿಸಿಸಿ ಬ್ಯಾಂಕ್/ಕಸ್ಕಾರ್ಡ್ ಬ್ಯಾಂಕಿನ ಹೆಸರು | ಅಲ್ಪಾವಧಿ ಕೃಷಿ ಸಾಲ | | ಮಧ್ಯಮಾವಧಿ/ದೀರ್ಘಾವಧಿ ಕೃಷಿ ಸಾಲ | | ಒಟ್ಟು ಕೃಷಿ ಸಾಲ | | ಈ ಪೈಕಿ ಹೊಸ ಸದಸ್ಯರಿಗೆ ವಿತರಿಸಬೇಕಾದ ರೈತರ ಸಂಖ್ಯೆ ಸಂಖ್ಯೆ |
|---|---|---|---|---|---|---|---|---|
| | | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | |
| 1 | Bagalkot | 304608 | 1672.00 | 1069 | 75.00 | 305677 | 1747.00 | 17789 |
| 2 | Bangalore | 126553 | 818.00 | 214 | 12.00 | 126767 | 830.00 | 11524 |
| 3 | Belgaum | 513345 | 2884.00 | 599 | 40.00 | 513944 | 2924.00 | 36722 |
| 4 | Bellary | 113238 | 1038.00 | 588 | 29.00 | 113826 | 1067.00 | 10348 |
| 5 | Bidar | 181810 | 1061.00 | 1604 | 46.00 | 183414 | 1107.00 | 16674 |
| 6 | Bijapur | 267367 | 1615.00 | 2139 | 69.00 | 269506 | 1684.00 | 19501 |
| 7 | Chikmagalur | 56815 | 980.00 | 428 | 29.00 | 57243 | 1009.00 | 5204 |
| 8 | Chitradurga | 68752 | 432.00 | 1176 | 75.00 | 69928 | 507.00 | 6357 |
| 9 | Davangere | 123334 | 749.00 | 428 | 35.00 | 123762 | 784.00 | 11251 |
| 10 | Dharwad | 113117 | 635.00 | 1069 | 63.00 | 114186 | 698.00 | 10381 |
| 11 | Gulburga | 142595 | 461.00 | 134 | 12.00 | 142729 | 473.00 | 12975 |
| 12 | Hassan | 171115 | 1003.00 | 513 | 35.00 | 171628 | 1038.00 | 15603 |
| 13 | N.Kanara | 116878 | 980.00 | 6952 | 144.00 | 123830 | 1124.00 | 11257 |
| 14 | Kodagu | 54309 | 749.00 | 1404 | 58.00 | 55713 | 807.00 | 5065 |
| 15 | Kolar | 53473 | 577.00 | 1123 | 46.00 | 54596 | 623.00 | 4963 |
| 16 | Mandya | 160420 | 1004.00 | 695 | 17.00 | 161115 | 1021.00 | 14647 |
| 17 | Mysore | 96252 | 992.00 | 891 | 46.00 | 97143 | 1038.00 | 8831 |
| 18 | Raichur | 149726 | 761.00 | 214 | 17.00 | 149940 | 778.00 | 13631 |
| 19 | S.Canara | 164877 | 2133.00 | 10066 | 231.00 | 174943 | 2364.00 | 15904 |
| 20 | Shimoga | 117642 | 1130.00 | 249 | 23.00 | 117891 | 1153.00 | 10717 |
| 21 | Tumkur | 139761 | 663.00 | 374 | 29.00 | 140135 | 692.00 | 12740 |
| 22 | Kascard bank | 0 | 0.00 | 32084 | 532.00 | 32084 | 532.00 | 27916 |
| | Total | 3235987 | 22337.00 | 64013 | 1663.00 | 3300000 | 24000.00 | 300000 |

(19)

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರೈತರು ಉತ್ಪಾದಿಸಿದ ಕೃಷಿ ಉತ್ಪನ್ನಗಳನ್ನು ಕರ್ನಾಟಕ ರಾಜ್ಯ ಉಗ್ರಾಣ ನಿಗಮ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು (PACS), TAPCMS ಹಾಗೂ ಇತರೆ ಸಹಕಾರ ಸಂಸ್ಥೆಗಳು ಹೊಂದಿರುವ ಗೋದಾಮುಗಳಲ್ಲಿ ಸಂಗ್ರಹಿಸಿಡಲು ರೈತರು ಪಾವತಿಸುವ ಸಂಗ್ರಹಣಾ ಶುಲ್ಕದಲ್ಲಿ ಶೇ. 25% ರಷ್ಟು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಶೇ.50% ರಷ್ಟು ಸಹಾಯಧನವನ್ನು ಒದಗಿಸುವ ಬಗ್ಗೆ.

**ಓದಲಾಗಿದೆ.** 1. 2021-21 ನೇ ಸಾಲಿನ ಆಯವ್ಯಯ ಘೋಷಣೆ ದಿ:08.03.2021
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಉಗ್ರಾಣ ನಿಗಮ ಇವರ ಕಛೇರಿ ಪತ್ರ ಸಂಖ್ಯೆ:ಕರಾಉನಿ/ವಾ-1/ ಆಯ್ಯವ್ಯಯ/ 163/2021-22, ದಿನಾಂಕ: 16.04.2021

*********

**ಪ್ರಸ್ತಾವನೆ**

ಮೇಲೆ ಓದಲಾದ ಕ್ರ.ಸಂ (1) ರಲ್ಲಿ 2021-22 ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ ಸಂಖ್ಯೆ 76 ರಲ್ಲಿ 'ರೈತರು ಉತ್ಪಾದಿಸಿದ ಕೃಷಿ ಉತ್ಪನ್ನಗಳನ್ನು ಕರ್ನಾಟಕ ರಾಜ್ಯ ಉಗ್ರಾಣ ನಿಗಮ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು (PACS, TAPCMS) ಹಾಗೂ ಇತರೆ ಸಹಕಾರ ಸಂಸ್ಥೆಗಳು ಹೊಂದಿರುವ ಗೋದಾಮುಗಳಲ್ಲಿ ಸಂಗ್ರಹಿಸಿಡಲು ರೈತರು ಪಾವತಿಸುವ ಸಂಗ್ರಹಣಾ ಶುಲ್ಕದಲ್ಲಿ ಶೇ. 25% ರಷ್ಟು ಸಹಾಯಧನವನ್ನು ಸರ್ಕಾರದ ವತಿಯಿಂದ ಒದಗಿಸಲಾಗುವುದು. ಈ ಉದ್ದೇಶಕ್ಕಾಗಿ 25 ಕೋಟಿ ರೂ. ಅನುದಾನ ನಿಗದಿಪಡಿಸಲಾಗಿದೆ' ಎಂದು ಘೋಷಿಸಲಾಗಿದೆ.

ಮೇಲೆ ಓದಲಾದ ಕ್ರ.ಸಂ (2) ರ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಉಗ್ರಾಣ ನಿಗಮ ಇವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಸದರಿ ಯೋಜನೆ ಅನುಷ್ಠಾನಕ್ಕೆ ಅನುಕೂಲವಾಗುವಂತೆ ಷರತ್ತುಗಳೊಂದಿಗೆ ಸರ್ಕಾರಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಒ 148 ಸಿಎಲ್ಎಸ್ 2021, ದಿನಾಂಕ:06-07-2021**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರೈತರು ಉತ್ಪಾದಿಸಿದ ಕೃಷಿ ಉತ್ಪನ್ನಗಳನ್ನು ಕರ್ನಾಟಕ ರಾಜ್ಯ ಉಗ್ರಾಣ ನಿಗಮ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು (PACS), TAPCMS ಹಾಗೂ ಇತರೆ ಸಹಕಾರ ಸಂಸ್ಥೆಗಳು ಹೊಂದಿರುವ ಗೋದಾಮುಗಳಲ್ಲಿ ಸಂಗ್ರಹಿಸಿಡಲು ರೈತರು ಪಾವತಿಸುವ ಸಂಗ್ರಹಣಾ ಶುಲ್ಕದಲ್ಲಿ ಶೇ. 25% ರಷ್ಟು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಶೇ.50% ರಷ್ಟು

..2

ಸಹಾಯಧನವನ್ನು ಒದಗಿಸುವ ಯೋಜನೆಯನ್ನು ಕೆಳಕಂಡ ಷರತ್ತುಗಳಿಗೊಳಪಟ್ಟು ಜಾರಿಗೊಳಿಸಲು ಸರ್ಕಾರ ಮಂಜೂರಾತಿ ನೀಡಿ ಆದೇಶಿಸಿದೆ.

**ಷರತ್ತುಗಳು:**

1. ಈ ಯೋಜನೆಯು ರೈತರು ಕರ್ನಾಟಕ ರಾಜ್ಯ ಉಗ್ರಾಣ ನಿಗಮ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು (PACS), TAPCMS ಹಾಗೂ ಇತರೆ ಸಹಕಾರ ಸಂಸ್ಥೆಗಳು ಹೊಂದಿರುವ ಗೋದಾಮುಗಳಲ್ಲಿ ಸಂಗ್ರಹಿಸಿದ ಕೃಷಿ ಉತ್ಪನ್ನಗಳಿಗೆ ಶೇ.25% ರಷ್ಟು ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಶೇ.50% ರಷ್ಟು ಸಹಾಯಧನ ನೀಡಲು ಮಾತ್ರ ಅನ್ವಯವಾಗುತ್ತದೆ. ಸಹಕಾರ ಸಂಘಗಳು ನಿರ್ವಹಿಸುತ್ತಿರುವ ಖಾಸಗಿ ಗೋದಾಮುಗಳಲ್ಲಿ, ರೈತರ ಸ್ವಂತ ಗೋದಾಮುಗಳಲ್ಲಿ ಶೇಖರಣೆ ಮಾಡುವ ಕೃಷಿ ಉತ್ಪನ್ನಗಳಿಗೆ ಅನ್ವಯವಾಗುವುದಿಲ್ಲ.

2. ಈ ಯೋಜನೆಯು ರೈತರು ಬೆಳೆದು ಸಂಗ್ರಹಿಸಿದ ಕೃಷಿ ಉತ್ಪನ್ನಗಳಿಗೆ ಅಂದರೆ ಆಹಾರ ಧಾನ್ಯಗಳು, ಎಣ್ಣೆಕಾಳು, ದ್ವಿದಳ ಧಾನ್ಯಗಳು, ವಾಣಿಜ್ಯ ಮತ್ತು ತೋಟಗಾರಿಕೆ ಬೆಳೆಗಳಿಗೆ ಮಾತ್ರ ಅನ್ವಯವಾಗಲಿದ್ದು, ದ್ವಿತೀಯ ಸಂಸ್ಕರಿಸಿದ ಉತ್ಪನ್ನ (Secondary Processed Products) ಗಳಿಗೆ ಅನ್ವಯವಾಗುವುದಿಲ್ಲ.

3. ದಿನಾಂಕ:01-04-2021 ರ ನಂತರದ ಅವಧಿಯಲ್ಲಿ ಸಂಗ್ರಹಿಸುವ ಕೃಷಿ ಉತ್ಪನ್ನಗಳಿಗೆ ಮಾತ್ರ ಈ ಯೋಜನೆ ಅನ್ವಯವಾಗಲಿದೆ. ಹಿಂದಿನ ಅವಧಿಯಲ್ಲಿ ಸಂಗ್ರಹಿಸಿ ಪ್ರಸ್ತುತ ದಾಸ್ತಾನು ಇರುವ ಕೃಷಿ ಉತ್ಪನ್ನಗಳಿಗೆ ಅನ್ವಯವಾಗುವುದಿಲ್ಲ.

4. ಈ ಯೋಜನೆಯಡಿ ರೈತರಿಗೆ ಸಂಗ್ರಹಣಾ ಸೌಲಭ್ಯ ಒದಗಿಸುವ ಸಂಸ್ಥೆಗಳು ಕರ್ನಾಟಕ ರಾಜ್ಯ ಉಗ್ರಾಣ ನಿಗಮದ ಆದೇಶ ಸಂಖ್ಯೆ: ಕರಾಉನಿ/ವಾ-1/ 836/2020-21 ದಿ: 26.06.2020ರಲ್ಲಿ ಪ್ರತಿ ಕೃಷಿ ಉತ್ಪನ್ನಗಳಿಗೆ ನಿಗದಿಪಡಿಸಿದ ಸಂಗ್ರಹಣಾ ಶುಲ್ಕಕ್ಕೆ ಮೀರದಂತೆ ದರ ನಿಗದಿಪಡಿಸಬೇಕು. ವಿಮೆ, ಧೂಮೋಪಚಾರ (fumigation) ಶುಲ್ಕ ಹಾಗೂ ಇತರೇ ವೆಚ್ಚಗಳು ಸಂಗ್ರಹಣಾ ಶುಲ್ಕದಲ್ಲಿ ಒಳಗೊಂಡಿರುವುದಿಲ್ಲ.

5. ಈ ರೀತಿ ಸಂಗ್ರಹಿಸಿದ ದಾಸ್ತಾನಿಗೆ ಗರಿಷ್ಠ 9 ತಿಂಗಳ ಅವಧಿಗೆ ಅಥವಾ ರೈತರು ಕೃಷಿ ಉತ್ಪನ್ನಗಳನ್ನು ಬಿಡುಗಡೆ ಪಡೆಯುವ ಅವಧಿ ಇದರಲ್ಲಿ ಯಾವುದು ಮೊದಲೋ ಆ ಅವಧಿಗೆ ರೈತರು ಪಾವತಿಸಬೇಕಾದ ಸಂಗ್ರಹಣಾ ಶುಲ್ಕದಲ್ಲಿ ಸರ್ಕಾರದಿಂದ ಶೇ.25 ರಷ್ಟು ಮತ್ತು ಪ.ಜಾ/ಪ.ಪಂ ರೈತರಿಗೆ ಸಂಬಂಧಿಸಿದಂತೆ ಶೇ.50% ರಷ್ಟು ಮೊತ್ತವನ್ನು ಸಂಬಂಧಿಸಿದ ಸಂಸ್ಥೆಗಳಿಗೆ ನೇರವಾಗಿ ಭರಿಸಲಿದ್ದು, ರೈತರಿಂದ ಈ ಶುಲ್ಕವನ್ನು ವಸೂಲು ಮಾಡತಕ್ಕದ್ದಲ್ಲ.

6. ಸಂಗ್ರಹಣಾ ಸಂಸ್ಥೆಗಳು ಪ್ರತಿ ತ್ರೈಮಾಸಿಕವಾಗಿ ಆಯಾ ತ್ರೈಮಾಸಿಕದ ಪ್ರಾರಂಭದ ದಿನಾಂಕದಿಂದ ಕಡೇ ದಿನಾಂಕದವರಗೆ ಸಂಗ್ರಹಿಸಿದ ದಾಸ್ತಾನಿಗೆ ಸರ್ಕಾರ ಪಾವತಿಸಬೇಕಾದ ಸಹಾಯಧನದ ಬಿಲ್ಲು ತಯಾರಿಸಿ ಸಂಬಂಧಿಸಿದ ಇಲಾಖಾ ಮುಖ್ಯಸ್ಥರಿಗೆ ಸಲ್ಲಿಸತಕ್ಕದ್ದು. ಯಾವುದೇ ತ್ರೈಮಾಸಿಕದಲ್ಲಿ 9 ತಿಂಗಳು ಮುಗಿದ ದಾಸ್ತಾನಿನ ಮೇಲೆ ಸಹಾಯಧನ ಕ್ಲೈಮ್ ಮಾಡತಕ್ಕದ್ದಲ್ಲ. ರೈತನಿಂದ ದಾಸ್ತಾನು ಬಿಡುಗಡೆ ಆಗುವ ದಿನಾಂಕದಂದು ಸಂಗ್ರಹಣಾ ಶುಲ್ಕ ಸಂಗ್ರಹಿಸಿದರೂ ಸಹ ಸರ್ಕಾರದಿಂದ ಪ್ರತಿ ತ್ರೈಮಾಸಿಕದಲ್ಲಿರುವ ದಾಸ್ತಾನಿಗೆ ಸಹಾಯಧನ ಕ್ಲೇಮು ಮಾಡತಕ್ಕದ್ದು.

(21)



7. ಕರ್ನಾಟಕ ರಾಜ್ಯ ಉಗ್ರಾಣ ವ್ಯವಸ್ಥಾಪಕರು ಪ್ರತೀ ತ್ರೈಮಾಸಿಕ ಮುಗಿದ 15 ದಿನದೊಳಗಾಗಿ ಪ್ರಾದೇಶಿಕ ವ್ಯವಸ್ಥಾಪಕರಿಗೆ ಬಿಲ್ಲು ಸಲ್ಲಿಸತಕ್ಕದ್ದು. ಕರಾಉ ನಿಗಮದ ಪ್ರಾದೇಶಿಕ ವ್ಯವಸ್ಥಾಪಕರು, ಎಲ್ಲಾ ಉಗ್ರಾಣಗಳ ಆಯ್ದ ಖಾತೆಗಳನ್ನು ಪರಿಶೀಲಿಸಿ ತ್ರೈಮಾಸಿಕ ಮುಗಿದ ಒಂದು ತಿಂಗಳೊಳಗಾಗಿ ದೃಢೀಕರಿಸಿ ಕರ್ನಾಟಕ ರಾಜ್ಯ ಉಗ್ರಾಣ ನಿಗಮದ ವ್ಯವಸ್ಥಾಪಕ ನಿರ್ದೇಶಕರಿಗೆ ಬಿಲ್ಲು ಸಲ್ಲಿಸತಕ್ಕದ್ದು.

8. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು (PACS), TAPCMS) ಹಾಗೂ ಇತರ ಸಹಕಾರ ಸಂಸ್ಥೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಪ್ರತಿ ತ್ರೈಮಾಸಿಕ ಮುಗಿದ 15 ದಿನದೊಳಗಾಗಿ ಸಂಬಂಧಿಸಿದ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರಿಗೆ ಬಿಲ್ಲು ಸಲ್ಲಿಸತಕ್ಕದ್ದು. ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರುಗಳು ಎಲ್ಲಾ ಸಹಕಾರ ಸಂಘಗಳ ಆಯ್ದ ಖಾತೆಗಳನ್ನು ಪರಿಶೀಲಿಸಿ ತ್ರೈಮಾಸಿಕ ಮುಗಿದ ಒಂದು ತಿಂಗಳೊಳಗಾಗಿ ದೃಢೀಕರಿಸಿ ಅಪೆಕ್ಸ್ ಬ್ಯಾಂಕಿನ ಮೂಲಕ ಸಹಕಾರ ಸಂಘಗಳ ನಿಬಂಧಕರಿಗೆ ಬಿಲ್ಲು ಸಲ್ಲಿಸತಕ್ಕದ್ದು.

9. ರೈತನ ಪಹಣಿಯಲ್ಲಿನ ಭೂ ವಿಸ್ತೀರ್ಣ, ನಮೂದಿಸಿರುವ ಬೆಳೆ ಮತ್ತು ಕೃಷಿ ಇಲಾಖೆ/ಆರ್ಥಿಕ ಸಾಂಖ್ಯಿಕ ನಿರ್ದೇಶನಾಲಯದಿಂದ ಲಭ್ಯವಾದ ಪ್ರತಿ ಎಕರೆಗೆ ನಿಗದಿಪಡಿಸಿದ ಇಳುವರಿಯನ್ನು ಪರಿಶೀಲಿಸಿ ಸಂಗ್ರಹಿಸಿರುವ ಕೃಷಿ ಉತ್ಪನ್ನ ಇದಕ್ಕೆ ಮೀರದೇ ಇರುವ ಬಗ್ಗೆ ಖಚಿತಪಡಿಸಿಕೊಂಡ ನಂತರವೇ ರೈತರಿಗೆ ಸಂಗ್ರಹಣಾ ಶುಲ್ಕದಲ್ಲಿ ಗರಿಷ್ಠ ಶೇ.25ರಷ್ಟು ಸಹಾಯಧನವನ್ನು ಒದಗಿಸತಕ್ಕದ್ದು, ಇತರೆ ಖಾಸಗಿ ವ್ಯಕ್ತಿಗಳು ರೈತನ ಹೆಸರಿನಲ್ಲಿ ಕೃಷಿ ಉತ್ಪನ್ನ ಶೇಖರಿಸಿ ಸಹಾಯಧನವನ್ನು ಪಡೆಯಲು ಅವಕಾಶ ನೀಡಬಾರದು. ಇದಕ್ಕಾಗಿ ರೈತರಿಂದ ಆಧಾರ್, ಪಹಣಿ ಮತ್ತು ಪಹಣಿಯಲ್ಲಿ ಬೆಳೆ ನಮೂದಾಗಿಲ್ಲದೇ ಇದ್ದಲ್ಲಿ ಬೆಳೆ ದೃಢೀಕರಣ ಪತ್ರವನ್ನು ಸಂಬಂಧಿಸಿದ ಸಂಸ್ಥೆಗಳು ಪಡೆದು ದಾಖಲೆ ನಿರ್ವಹಿಸತಕ್ಕದ್ದು.

10. ಈ ಯೋಜನೆಯಲ್ಲಿ ಗೋದಾಮು ಹೊಂದಿರುವ ಸಹಕಾರ ಸಂಘಗಳು ಯೋಜನೆಯಲ್ಲಿ ಭಾಗವಹಿಸಲು ಸಹಕಾರ ಸಂಘಗಳ ಉಪ ನಿಬಂಧಕರ ಮೂಲಕ ಸಹಕಾರ ಸಂಘಗಳ ನಿಬಂಧಕರಿಂದ ಅನುಮೋದನೆ ಪಡೆಯತಕ್ಕದ್ದು.

11. ಈ ಯೋಜನೆಯಡಿ ಸಂಗ್ರಹಣಾ ಶುಲ್ಕದ ಮೇಲೆ ನೀಡಿದ ವಿನಾಯಿತಿಯನ್ನು ಮೊದಲು ಸಂಗ್ರಹಣೆ ಮಾಡಿದ ರೈತರಿಗೆ ಆದ್ಯತೆ ಮೇಲೆ ವಿಸ್ತರಿಸತಕ್ಕದ್ದು (First Come First Serve Basis).

12. ಸದರಿ ಯೋಜನೆಯ ಪ್ರಯೋಜನವನ್ನು ಹೆಚ್ಚಿನ ಸಂಖ್ಯೆಯ ರೈತರಿಗೆ ಮತ್ತು ನೈಜವಾಗಿಯು ಅಗತ್ಯವಿರುವ ಅದರಲ್ಲೂ ಪ್ರಮುಖವಾಗಿ ಸಣ್ಣ ಮತ್ತು ಅತಿಸಣ್ಣ ರೈತರಿಗೆ ತಲುಪಿಸುವ ಉದ್ದೇಶವಿದ್ದು, ಸಹಾಯಧನವನ್ನು ಐದು ಎಕರೆ ವ್ಯಾಪ್ತಿಗೆ ಸೀಮಿತಗೊಳಿಸಿ, ನೀಡುವುದು.

13. ಈ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕಾಲಕಾಲಕ್ಕೆ ಸರ್ಕಾರ ನೀಡುವ ಸೂಚನೆಗಳನ್ನು ಸಹಕಾರ ಸಂಘಗಳ ನಿಬಂಧಕರು, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಉಗ್ರಾಣ ನಿಗಮ ಇವರು ಕಡ್ಡಾಯವಾಗಿ ಪಾಲಿಸತಕ್ಕದ್ದು.

14. ಈ ಯೋಜನೆ ಅನುಷ್ಠಾನಕ್ಕಾಗಿ ಅನುದಾನವನ್ನು ಸಹಕಾರ ಸಂಘಗಳ ನಿಬಂಧಕರ ಆಯ-ವ್ಯಯದಲ್ಲಿ ಒದಗಿಸಿರುವುದರಿಂದ ಕ್ಲೈಮ್ ಬಿಲ್ಲುಗಳನ್ನು ನಿಬಂಧಕರು ಇತ್ಯರ್ಥಪಡಿಸತಕ್ಕದ್ದು. ಉಗ್ರಾಣ ನಿಗಮದ ಬೇಡಿಕೆಯನ್ನು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಉಗ್ರಾಣ ನಿಗಮ ಮತ್ತು ಸಹಕಾರ ಸಂಘಗಳ ಬೇಡಿಕೆಯನ್ನು ಸಹಕಾರ ಸಂಘಗಳ ನಿಬಂಧಕರು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

..4

15. ಸರ್ಕಾರ ವ್ಯವಸ್ಥಾಪಕ ನಿರ್ದೇಶಕರು, ಉಗ್ರಾಣ ನಿಗಮ ಮತ್ತು ಸಹಕಾರ ಸಂಘಗಳು ಸಹಕಾರ ಸಂಘಗಳ ನಿಬಂಧಕರು ಸಲ್ಲಿಸಿದ ಬೇಡಿಕೆಗೆ ಅನುಗುಣವಾಗಿ ಸಂಬಂಧಿಸಿದ ಮೊತ್ತವನ್ನು ನಿಬಂಧಕರಿಗೆ ಬಿಡುಗಡೆ ಮಾಡಲಾಗುವುದು. ನಿಬಂಧಕರು ಖಜಾನೆಯಿಂದ ಡ್ರಾ ಮಾಡಿ ಅಪೆಕ್ಸ್ ಬ್ಯಾಂಕಿನಲ್ಲಿಟ್ಟು ಕರ್ನಾಟಕ ರಾಜ್ಯ ಉಗ್ರಾಣ ನಿಗಮಕ್ಕೆ ಮತ್ತು ಸಹಕಾರ ಸಂಘಗಳ ಉಳಿತಾಯ ಖಾತೆಗಳಿಗೆ ಅನುದಾನ ಬಿಡುಗಡೆ ಮಾಡತಕ್ಕದ್ದು ಮತ್ತು ಬಳಕೆ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು.

16. ಸಂಗ್ರಹಣಾ ಸಂಸ್ಥೆಗಳು ಸರ್ಕಾರದ ಸಹಾಯಧನದ ಬಿಲ್ಲುಗಳನ್ನು ಪ್ರತಿ ತ್ರೈಮಾಸಿಕವಾಗಿ ತಯಾರಿಸಲು ಕರ್ನಾಟಕ ರಾಜ್ಯ ಉಗ್ರಾಣ ನಿಗಮದ ವ್ಯವಸ್ಥಾಪಕ ನಿರ್ದೇಶಕರು ಮತ್ತು ಸಹಕಾರ ಸಂಘಗಳ ನಿಬಂಧಕರು ಜಂಟಿಯಾಗಿ ನಮೂನೆಗಳನ್ನು ಸಿದ್ಧಪಡಿಸಿ ಸಂಬಂಧಿಸಿದ ಸಂಸ್ಥೆಗಳಿಗೆ ನೀಡಬೇಕು.

17. ಈ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ರೈತರಿಗೆ ಸ್ಥಳೀಯವಾಗಿ ಸಹಕಾರ ಇಲಾಖೆ, ಕೃಷಿ ಇಲಾಖೆ, ಕೃಷಿ ಮಾರಾಟ ಇಲಾಖೆ, ಕರ್ನಾಟಕ ರಾಜ್ಯ ಉಗ್ರಾಣ ನಿಗಮ, ಪ್ರಾಥಮಿಕ ಕೃಷಿ ಪತ್ತಿನ ಸಂಘಗಳು (PACS, TAPCMS ಗಳು ಹಾಗೂ ಇತರೆ ಸಹಕಾರ ಸಂಸ್ಥೆಗಳು ಪ್ರಚಾರ ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 62 ವೆಚ್ಚ-2/2021, ದಿನಾಂಕ:05.07.2021 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಂ. ವೆಂಕಟಸ್ವಾಮಿ)
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಸಹಕಾರ ಇಲಾಖೆ

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು, ಇವರಿಗೆ ಕರ್ನಾಟಕ ರಾಜ್ಯಪತ್ರ ದಲ್ಲಿ ಕೂಡಲೇ ಪ್ರಕಟಿಸಿ, ಅದರ 100 ಪ್ರತಿಗಳನ್ನು ಒದಗಿಸಲು ಕೋರಿದೆ.

**ಪ್ರತಿಗಳು :**

1. ಪ್ರಧಾನ ಮಹಾಲೇಖಪಾಲರು, (ಜಿ&ಎಸ್‌ಎಸ್‌ಎ)/(ಇ&ಆರ್‌ಎಸ್‌ಎ)/(ಎ&ಇ), ಕರ್ನಾಟಕ ರಾಜ್ಯ, ಬೆಂಗಳೂರು.
2. ಮಾನ್ಯ ಸಹಕಾರ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನಾ ಇಲಾಖೆ, ಬಹುಮಹಡಿ ಕಟ್ಟಡ
6. ಸಹಕಾರ ಸಂಘಗಳ ನಿಬಂಧಕರು, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-52.

7. ನಿರ್ದೇಶಕರು, ಸಹಕಾರ ಲೆಕ್ಕಪರಿಶೋಧನಾ, ಶಂಕರಮಠ ರಸ್ತೆ, ಬಸವನಗುಡಿ, ಬೆಂಗಳೂರು-04.
8. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಉಗ್ರಾಣ ನಿಗಮ, ಉಗ್ರಾಣ ಭವನ, ನಂ.43, ಪ್ರೀಂರೋಸ್ ರಸ್ತೆ, ಬೆಂಗಳೂರು -560025
9. ಮುಖ್ಯಕಾರ್ಯನಿರ್ವಹಣಾಧಿಕಾರಿ, ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಉತ್ತುಂಗ, ನಂ.1, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-18.
10. ಮುಖ್ಯಕಾರ್ಯನಿರ್ವಹಣಾಧಿಕಾರಿ, ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್, ಚಾಮರಾಜಪೇಟೆ, ಬೆಂಗಳೂರು
11. ಆಂತರಿಕ ಆರ್ಥಿಕ ಸಲಹೆಗಾರರು, ಸಹಕಾರ ಇಲಾಖೆ, ಬಹುಮಹಡಿಕಟ್ಟಡ, ಬೆಂಗಳೂರು.
12. ಮಾನ್ಯ ಸಹಕಾರ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು
13. ಸರ್ಕಾರದ ಅಧೀನ ಕಾರ್ಯದರ್ಶಿ-2, ಸಹಕಾರ ಇಲಾಖೆ, ಬೆಂಗಳೂರು
14. ರಾಜ್ಯ ಹುಜೂರ್ ಖಜಾನೆ, ನೃಪತುಂಗರಸ್ತೆ, ಬೆಂಗಳೂರು.
15. ರಾಜ್ಯ ಖಜಾನೆ ಅಧಿಕಾರಿ, ಜೆ.ಸಿ. ರಸ್ತೆ, ಬೆಂಗಳೂರು.
16. ಶಾಖಾ ರಕ್ಷಾ ಕಡತ : ಹೆಚ್ಚುವರಿ ಪ್ರತಿ